# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕರ್ನಾಟಕ
Karnataka

ಸಂ:ಸ.ಆ(ಜಾ)ಪಿಆರ್/ /15-16

ಸಹಾಯಕ ಆಯುಕ್ತರವರ ಕಛೇರಿ,
ಜಾಹೀರಾತು ವಿಭಾಗ,
ಎನ್.ಆರ್.ವೃತ್ತ,
ಬೆಂಗಳೂರು-560002,
ದಿನಾಂಕ: 09.09.2015.

**ಅವಶ್ಯ ಆಡಳಿತ ಸುಧಾರಣಾ ಕ್ರಮಗಳ ಬಗ್ಗೆ**
**ನಾಲ್ಕನೇ ವರದಿ**

ರವರಿಗೆ,
**ಮಾನ್ಯ ಆಯುಕ್ತರು,**
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು-560002.

ಮಾನ್ಯರೇ,

ವಿಷಯ: **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಅನಧಿಕೃತ ಜಾಹೀರಾತುಗಳನ್ನು ತೆರವುಗೊಳಿಸುವ ಕುರಿತು ವರದಿ.**

ಉಲ್ಲೇಖ:
1. ಸಹಾಯಕ ಆಯುಕ್ತರು(ಜಾಹೀರಾತು)ರವರ ಮೊದನೇ ವರದಿ ದಿನಾಂಕ:09.07.2015.
2. ಮಾನ್ಯ ಆಡಳಿತಗಾರರ ಸಭೆಯ ನಡವಳಿ ದಿನಾಂಕ:14.07.2015.
3. ಸಹಾಯಕ ಆಯುಕ್ತರು(ಜಾಹೀರಾತು)ರವರ ಆಡಳಿತ ಸುಧಾರಣಾ ಕ್ರಮಗಳ ಮೂರನೇ ವರದಿ ದಿನಾಂಕ:28.08.2015.

## I. ಪಾಲಿಕೆ ವ್ಯಾಪ್ತಿಯಲ್ಲಿ ಅನಧೀಕೃತ ಜಾಹೀರಾತುಗಳ ತೆರವು ಕಾರ್ಯಾಚರಣೆಗೆ ಅವೈಜ್ಞಾನಿಕ ರೀತಿ/ನೀತಿ ಅಳವಡಿಕೆಯಿಂದ ನಡೆದಿರುವ ಅವ್ಯವಹಾರಗಳು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಅನಧಿಕೃತ ಜಾಹೀರಾತುಗಳನ್ನು 3 ವಿವಿಧ ರೀತಿಯ ಅವೈಜ್ಞಾನಿಕ ಮಾನದಂಡ ಆಧರಿಸಿ, ಖಾಸಗೀ ಗುತ್ತಿಗೆದಾರರಿಗೆ ತೆರವು ಕಾರ್ಯಾಚರಣೆಯನ್ನು ನಡೆಸಲು ಆಯುಕ್ತರಿಂದ ಕಾರ್ಯಾದೇಶ ನೀಡಲಾಗಿತ್ತು. ಸದರಿ ಆದೇಶಗಳು ಈ ಕೆಳಕಂಡಂತಿದೆ.

1. ಅನಧಿಕೃತ ಜಾಹೀರಾತುಗಳ ತೆರವು ಕಾರ್ಯಾಚರಣೆ 8 ವಲಯಗಳ ಪೈಕಿ 5 ವಲಯಗಳಲ್ಲಿ ತೆರವುಗೊಳಿಸಿದ **ಕಬ್ಬಿಣವನ್ನು ಉಚಿತವಾಗಿ ಗುತ್ತಿಗೆದಾರರು ತೆಗೆದುಕೊಂಡು ಹೋಗಲು ಆದೇಶ ನೀಡಲಾಗಿತ್ತು.**

ಸಹ ಕಂದಾಯ ಅಧಿಕಾರಿ
ಜಾಹೀರಾತು ವಿಭಾಗ
ಬೆಂಗಳೂರು ಮಹಾನಗರ ಪಾಲಿಕೆ,

2. ಉಳಿದ 3 ವಲಯಗಳಲ್ಲಿ ಅನಧಿಕೃತ ಜಾಹೀರಾತುಗಳಿಗೆ ದಂಡ ವಿಧಿಸಿ, **ವಸೂಲಿಯಾದ ದಂಡದಲ್ಲಿ ಶೇ.50% ರಷ್ಟು ಮೊತ್ತವನ್ನು ಗುತ್ತಿಗೆದಾರರಿಗೆ ಪಾವತಿಸುವುದಾಗಿ** ಆದೇಶ ನೀಡಲಾಗಿದೆ.
3. ತದನಂತರ, 3 ವಲಯಗಳಿಗೆ ನೀಡಲಾದ ಆದೇಶದಂತೆ, **ತೆರವುಗೊಳಿಸಿದ ಕಬ್ಬಿಣದ ಪ್ರತಿ ಕೆ.ಜಿ.ಗೆ 6.50 ರೂ. ನಂತೆ ಪಾಲಿಕೆಗೆ** ಪಾವತಿಸುವಂತೆ ಆದೇಶಿಸಲಾಗಿರುತ್ತದೆ.

ಈ ಮೇಲಿನಂತೆ ಜಾಹೀರಾತು ಸಂಬಂಧಿ, ಪಾಲಿಕೆಯಲ್ಲಿ ಹಾಲಿ ಅನುಸರಿಸುತ್ತಿರುವ ವಿವಿಧ ಕಾನೂನು ಬಾಹಿರ ಟೆಂಡರ್ ನೀತಿಯಿಂದಾಗಿ ಪಾಲಿಕೆ ವ್ಯಾಪ್ತಿಯಲ್ಲಿರುವ ಅನಧಿಕೃತ ಜಾಹೀರಾತುಗಳನ್ನು ತೆರವುಗೊಳಿಸಲು ಅಸಾಧ್ಯವಾಗಿರುತ್ತದೆ. **(ದಾಖಲೆಯನ್ನು ಪುಟ ಸಂಖ್ಯೆ: 6 ರಿಂದ 21 ರವರೆಗೆ ಲಗತ್ತಿಸಿದೆ)**

## II. ಅನಧಿಕೃತ ಜಾಹೀರಾತುಗಳಿಗೆ ದಂಡ ವಿಧಿಸಿ, ತೆರವುಗೊಳಿಸಲು, ಹಾಗೂ ತೆರವುಗೊಳಿಸಿರುವ ಸಾಮಗ್ರಿಗಳನ್ನು ಪಾಲಿಕೆಯ ವಶಕ್ಕೆ ಪಡೆದು ಅವುಗಳನ್ನು ಹರಾಜು ಮಾಡಿ ಪಾಲಿಕೆಗೆ ಆದಾಯ ತರುವ ವಿವಿಧ ಪ್ರಯತ್ನಗಳ ವಿಫಲತೆಯಿಂದ ಪಾಲಿಕೆಗೆ ಕೋಟ್ಯಾಂತರ ರೂ.ಗಳ ನಷ್ಟ.

ಮೇಲಿನ ವಿವಿಧ ಅವೈಜ್ಞಾನಿಕ ರೀತಿ ನೀತಿಗಳಿಂದಾಗಿ ಪಾಲಿಕೆಯ ಆದಾಯಕ್ಕೆ ನಷ್ಟವುಂಟಾಗಿರುವ ಹಿನ್ನೆಲೆಯಲ್ಲಿ ಕಳೆದ ಸುಮಾರು 8 ತಿಂಗಳಿಂದ ವಿವಿಧ ರೀತಿಯ ಸುತ್ತೋಲೆಗಳನ್ನು ಕೇಂದ್ರ ಕಛೇರಿಯಿಂದ ವಲಯ ಆಯುಕ್ತರುಗಳಿಗೆ ನೀಡಲಾಗಿತ್ತು. ಸದರಿ ಸುತ್ತೋಲೆಗಳಂತೆ, ಅನಧಿಕೃತ ಜಾಹೀರಾತುಗಳಿಗೆ ದಂಡವಿಧಿಸಿ, ತೆರವುಗೊಳಿಸಲು ಹಾಗೂ ತೆರವುಗೊಳಿಸಿದ ಸಾಮಗ್ರಿಗಳನ್ನು ಗೋಡೌನ್‌ನಲ್ಲಿ ಶೇಖರಿಸಿದ ನಂತರ ಅವುಗಳನ್ನು ಟೆಂಡರ್ ಕರೆದು ವಿಲೇವಾರಿ ಮಾಡಬೇಕಾಗಿತ್ತು. ಆದರೆ, ಅನಧಿಕೃತ ಜಾಹೀರಾತುಗಳ ತೆರವು ಕಾರ್ಯವಾಗಲೀ, ದಂಡ ವಸೂಲಿ ಮಾಡುವುದಾಗಲೀ ಅಥವಾ ತೆರಿಗೆ ವಸೂಲಿಯಾಗಲೀ ಸಮರ್ಪಕವಾಗಿ ನಡೆಯದಿರುವುದರಿಂದ ಪಾಲಿಕೆಗೆ ಕೋಟ್ಯಾಂತರ ರೂ.ಗಳ ನಷ್ಟವುಂಟಾಗಿರುತ್ತದೆ. **(ದಾಖಲೆಯನ್ನು ಪುಟ ಸಂಖ್ಯೆ:22 ರಿಂದ 33 ರವರೆಗೆ ಲಗತ್ತಿಸಿದೆ)**

## III. ಹಂಚಿ ಹೋಗಿರುವ ಜಾಹೀರಾತು ವಿಭಾಗದ ಕೆಲಸಕಾರ್ಯಗಳನ್ನು ಜಾಹೀರಾತು ವಿಭಾಗದ ಅಡಿ ತರುವ ಅವಶ್ಯಕತೆ.

ಆರೋಗ್ಯ ಇಲಾಖೆಯ ಎಲ್ಲಾ ಕೆಲಸ ಕಾರ್ಯಗಳಿಗೆ ಆರೋಗ್ಯ ಇಲಾಖೆಯೇ ಜವಾಬ್ದಾರಿ ವಹಿಸುತ್ತದೆ. ಇಂಜಿನಿಯರಿಂಗ್ ವಿಭಾಗದ ಕೆಲಸಕಾರ್ಯಗಳನ್ನು ಇಂಜಿನಿಯರ್‌ಗಳು ಮಾತ್ರ ನಡೆಸುತ್ತದೆ. ಆದರೆ, ಜಾಹೀರಾತು ವಿಭಾಗದ ಎಲ್ಲಾ ಕೆಲಸಕಾರ್ಯಗಳು ಜಾಹೀರಾತು ವಿಭಾಗದಡಿ ಬಂದಾಗ ಮಾತ್ರ ಜಾಹೀರಾತು ಸಂಬಂಧಿ ವಿಷಯಗಳಿಗೆ ಜಾಹೀರಾತು ಶಾಖೆಯನ್ನು ಜವಾಬ್ದಾರರನ್ನಾಗಿ ಮಾಡಬಹುದಾಗಿದೆ. ಆದರೆ, ಹಾಲಿ ಜಾಹೀರಾತು ವಿಭಾಗದ ಎಲ್ಲಾ ಕೆಲಸಕಾರ್ಯಗಳನ್ನು ಈ ಕೆಳಗಿನಂತೆ ವಿವಿಧ ಇಲಾಖೆ/ಶಾಖೆಗಳು ನಿರ್ವಹಿಸುತ್ತಿವೆ.

1. ಜಾಹೀರಾತು ವಿಭಾಗದ ಎಲ್ಲಾ ಕೆಲಸಕಾರ್ಯಗಳನ್ನು ವಲಯ ಆಯುಕ್ತರುಗಳಿಗೆ ಪ್ರತ್ಯಾಯೋಜಿಸಿ, 2007ರಲ್ಲಿ ಆದೇಶಿಸಲಾಗಿದೆ.

2. ಆದರೆ, ಸರ್ಕಾರಿ ಸ್ವತ್ತುಗಳಲ್ಲಿರುವ ಜಾಹೀರಾತುಗಳನ್ನು ಜಾಹೀರಾತು ಕೇಂದ್ರ ಕಛೇರಿಯಲ್ಲಿ ನಿರ್ವಹಿಸಲಾಗುತ್ತಿದೆ.

3. ಪಾಲಿಕೆ ವ್ಯಾಪ್ತಿಯಲ್ಲಿರುವ ಬಸ್ ತಂಗುದಾಣಗಳ ಅಳವಡಿಕೆಗೆ ಟೆಂಡರ್ ಪ್ರಕ್ರಿಯೆಯನ್ನು ಈ ಹಿಂದೆ ಜಾಹೀರಾತು ಶಾಖೆಯಲ್ಲಿ ಇಂಜಿನಿಯರ್‌ಗಳಿಂದ ನಡೆಸಲಾಗುತ್ತಿತ್ತು.

4. ಹಾಲಿ ಬಸ್ ತಂಗುದಾಣಗಳ ಟೆಂಡರ್ ಪ್ರಕ್ರಿಯೆಯನ್ನು ರಸ್ತೆ ಮತ್ತು ಮೂಲಭೂತ ಸೌಕರ್ಯ (ಟಿ.ಇ.ಸಿ) ವಿಭಾಗದಿಂದ ನಡೆಸಲಾಗುತ್ತಿದೆ. ಆದರೆ, **250 ಬಸ್ ತಂಗುದಾಣಗಳ ಟೆಂಡರ್ ಅವಧಿ ಮುಗಿದಿದ್ದು, ಸದರಿ ಬಸ್ ತಂಗುದಾಣಗಳಿಂದ ತೆರಿಗೆ ಬರುತ್ತಿಲ್ಲ. ಆದರೆ, ಜಾಹೀರಾತು ಅನಧಿಕೃತವಾಗಿ** ಮುಂದುವರಿದಿರುತ್ತದೆ.

5. ರಸ್ತೆ ವಿಭಜಕಗಳಲ್ಲಿರುವ ಜಾಹೀರಾತುಗಳು ಹಾಗೂ Traffic island ಗಳಲ್ಲಿರುವ ಜಾಹೀರಾತುಗಳನ್ನು ತೋಟಗಾರಿಕೆ ಇಲಾಖೆಯಿಂದ ಅನುಮತಿ ನೀಡಲಾಗುತ್ತಿದೆ.

6. ಮರಗಳ ಮೇಲೆ ಹಾಕಿರುವ ಜಾಹೀರಾತುಗಳು ಅರಣ್ಯ ಇಲಾಖೆಯ ವ್ಯಾಪ್ತಿಗೆ ಬರುತ್ತಿವೆ.

7. **ರಸ್ತೆಗಳಲ್ಲಿ ಹಾಕಲಾಗಿರುವ ಬ್ಯಾರಿಕೇಡ್ ಗಳಲ್ಲಿರುವ ಜಾಹೀರಾತುಗಳನ್ನು, ಪೋಲಿಸ್ ಇಲಾಖೆಯು ನಿಯಂತ್ರಿಸುತ್ತಿವೆ.** ಆದರೆ, ಪಾಲಿಕೆಗೆ ಯಾವುದೇ ರೀತಿಯ ತೆರಿಗೆ ಪಾವತಿಯಾಗುತ್ತಿಲ್ಲ.

8. **ಬಿ.ಎಂ.ಟಿ.ಸಿ ಬಸ್‌ಗಳ ಮೇಲೆ ಸಾವಿರಾರು ಜಾಹೀರಾತುಗಳನ್ನು, ಪ್ರದರ್ಶಿಸಲಾಗುತಿದೆ. ಆದರೆ ಪಾಲಿಕೆಗೆ ಯಾವುದೇ ತೆರಿಗೆ ಪಾವತಿಯಾಗುತ್ತಿಲ್ಲ.**

9. ಆಟೋ ರಿಕ್ಷಾಗಳ ಮೇಲೆ ಸಾವಿರಾರು ಜಾಹೀರಾತು ಪ್ರದರ್ಶಿಸಲ್ಪಡುತ್ತಿದೆ ಆದರೆ, ಇದರಿಂದಲೂ ಪಾಲಿಕೆಗೆ ಯಾವುದೇ ತೆರಿಗೆ ಪಾವತಿಯಾಗುತ್ತಿಲ್ಲ.

ಆದುದರಿಂದ, ಮೇಲಿನ ಹಾಗೂ ಇನ್ನಿತರೆ ಎಲ್ಲಾ ವಿದಧ ಜಾಹೀರಾತುಗಳ ಅಳವಡಿಕೆ/ನಿರ್ವಹಣೆಯು ಜಾಹೀರಾತು ಕೇಂದ್ರ ಕಛೇರಿಯ ವ್ಯಾಪ್ತಿಗೊಳಪಡಿಸಿದ್ದಲ್ಲಿ ಮಾತ್ರ ಜಾಹೀರಾತು ಕೇಂದ್ರ ಕಛೇರಿಗೆ ಜಾಹೀರಾತು ವಿಷಯಗಳ ಮೇಲೆ ಸಂಪೂರ್ಣ ಹಿಡಿತ ಸಾಧಿಸಬಹುದಾಗಿದ್ದು, ಪಾಲಿಕೆಗೆ ಹೆಚ್ಚಿನ ಆದಾಯ ತರುವ ನಿಟ್ಟಿನಲ್ಲಿ ಕೆಲಸ ನಿರ್ವಹಿಸಬಹುದಾಗಿದೆ.

## IV. ಆಡಳಿತ ವ್ಯವಸ್ಥೆಯ ಹಿಡಿತದಲ್ಲಿಲ್ಲದ ಇಂಜಿನಿಯರಿಂಗ್ ವಿಭಾಗ:

ಜಾಹೀರಾತು ವಿಭಾಗದಲ್ಲಿ ಟೆಂಡರ್ ಕಡತಗಳ ನಿರ್ವಹಣೆಗೆ ಇಂಜಿನಿಯರ್‌ಗಳನ್ನು ನಿಯೋಜಿಸುವಂತೆ ಕೋರಲಾಗಿ ಶ್ರೀ.ಮುಕುಂದ ಕಾರ್ಯಪಾಲಕ ಅಭಿಯಂತರರು, ಮತ್ತು ಶ್ರೀ.ಈಶ್ವರಯ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ರವರನ್ನು ಈ ಕಛೇರಿಗೆ ನಿಯೋಜಿಸಲಾಗಿತ್ತು ಆದರೆ ಸದರಿ ಅಧಿಕಾರಿಗಳನ್ನು ಅಧಿಕ ಪ್ರಭಾರದ ಮೇಲೆ ಈ ಕಛೇರಿಗೆ ನಿಯೋಜಿಸಿರುವುದರಿಂದ, ಸದರಿಯವರು ಈ ಕಛೇರಿಗೆ ಸಿ.ಟಿ.ಸಿಯನ್ನು ಸಲ್ಲಿಸಿದ ನಂತರ ಜಾಹೀರಾತು ವಿಭಾಗದಲ್ಲಿ

ಹಾಜರಾತಿಯನ್ನು ಸಲ್ಲಿಸುತ್ತಿಲ್ಲ ನಂತರ ಟೆಂಡರ್ ಆಹ್ವಾನಿಸಬೇಕಾದ ಪ್ರಮುಖ ಕಡತಗಳನ್ನು ಸಹಾಯಕ ಆಯುಕ್ತರು(ಜಾಹೀರಾತು)ರವರು ಸದರಿ ಇಂಜಿನಿಯರ್‌ಗಳಿಗೆ ಮಾರ್ಕ್ ಮಾಡಲಾಗಿ ಸದರಿ ಅಧಿಕಾರಿಯವರು ಈ ಕಡತಗಳನ್ನು ಸ್ವೀಕರಿಸಲು ನಿರಾಕರಿಸಿ, ಕಡತಗಳನ್ನು ಅಪರ ಆಯುಕ್ತರು(ಜಾಹೀರಾತು)ರವರ 'ಮುಖಾಂತರ ಕಳುಹಿಸಿದ್ದಲ್ಲಿ ಮಾತ್ರ ಸ್ವೀಕರಿಸಲಾಗುವುದು ಎಂದು ಉತ್ತರಿಸಿರುತ್ತಾರೆ ಹಾಗೂ ಸಹಾಯಕ ಆಯುಕ್ತರು(ಜಾಹೀರಾತು)ರವರು ಕಾರ್ಯಪಾಲಕ ಅಭಿಯಂತರರು ರವರಿಗೆ ಕಡತವನ್ನು ಮಾರ್ಕ ಮಾಡಲು ಅಧಿಕಾರವಿಲ್ಲವೆಂದು ದೂರವಾಣಿ ಮುಖಾಂತರ ತಿಳಿಸಿರುವ ಕುರಿತು ಉಲ್ಲೇಖ 1ರ ವರದಿಯಲ್ಲಿ ಉಲ್ಲೇಖಿಸಲಾಗಿರುತ್ತದೆ. ಸದರಿ ಅಧಿಕಾರಿಯವರು ಈ ಕಛೇರಿಗೆ ವರದಿ ಮಾಡಿಕೊಂಡ ನಂತರ ಹಾಲಿ ಪಾಲಿಕೆ ವ್ಯಾಪ್ತಿಯಲ್ಲಿರುವ ಅನಧಿಕೃತ ಜಾಹೀರಾತುಗಳನ್ನು ತೆರವುಗೊಳಿಸಲು ನೀಡಿದ್ದ ಕಾರ್ಯಾದೇಶಗಳನ್ನು ರದ್ದುಪಡಿಸಿ ಹೊಸದಾಗಿ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಆದರೆ ಸದರಿ ಟೆಂಡರ್‌ನಲ್ಲಿ ಯಾರೂ ಭಾಗವಹಿಸಿರುವುದಿಲ್ಲ ನಂತರ ಮತ್ತೊಮ್ಮೆ ಮರುಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಇದರಿಂದ ಪಾಲಿಕೆ ವ್ಯಾಪ್ತಿಯಲ್ಲಿರುವ ಅನಧಿಕೃತ ಜಾಹೀರಾತುಗಳನ್ನು ತೆರವುಗೊಳಿಸಲು ಹಿಂದೆ ನೀಡಿದ ಖಾಸಗಿ ಗುತ್ತಿಗೆದಾರರನ್ನು ಸಹ ಉಪಯೋಗಿಸಲು ಸಾಧ್ಯವಾಗುತ್ತಿಲ್ಲ ಮತ್ತು ಹೊಸ ಟೆಂಡರ್ ಪ್ರಕ್ರಿಯೆಯು ಅಂತಿಮವಾಗದೇ ಗುತ್ತಿಗೆದಾರರನ್ನು ನಿಯೋಜಿಸಲು ಸಾಧ್ಯವಾಗಿಲ್ಲ ಇದರಿಂದ ಪಾಲಿಕೆ ವ್ಯಾಪ್ತಿಯಲ್ಲಿರುವ ಅನಧಿಕೃತ ಜಾಹೀರಾತುಗಳನ್ನು ತೆರವುಗೊಳಿಸಲು ಸಾಧ್ಯವಾಗದೇ ಅನಧಿಕೃತ ಜಾಹೀರಾತುಗಳು ಹೆಚ್ಚಾಗಿರುತ್ತದೆ. ಅನಧಿಕೃತ ಜಾಹೀರಾತುಗಳಿಗೆ ಯಾವುದೇ ದಂಡ ವಿಧಿಸದಿರುವುದರಿಂದ ಪಾಲಿಕೆಯ ಆದಾಯಕ್ಕೆ ನಷ್ಟ ಉಂಟಾಗಿರುತ್ತದೆ.

ಜಾಹೀರಾತು ವಿಭಾಗದಲ್ಲಿ ಟೆಂಡರ್‌ನ್ನು ಆಹ್ವಾನಿಸುವ ಅನೇಕ ಕಡತಗಳು ಬಾಕಿ ಇದ್ದು ಸದರಿ ಕಛೇರಿಗೆ ನಿಯೋಜಿಸಿರುವ ಅಧಿಕಾರಿಗಳು ಈ ಕಛೇರಿಯಲ್ಲಿ ಸರಿಯಾಗಿ ಕಾರ್ಯನಿರ್ವಹಿಸದೆ ಇರುವುದರಿಂದ ಸದರಿ ಅಧಿಕಾರಿಗಳನ್ನು ಬೇರೆ ಕಛೇರಿಗೆ ವರ್ಗಾವಣೆ <u>ಮಾಡಿ ಜಾಹೀರಾತು ವಿಭಾಗಕ್ಕೆ ಬೇರೆ ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರನ್ನು ನಿಯೋಜಿಸಲು ಕ್ರಮವಹಿಸಲು ಸೂಕ್ತವಾಗಿರುತ್ತದೆ</u> ಮತ್ತು ಅನಧಿಕೃತ ಜಾಹೀರಾತುಗಳನ್ನು ತೆರವುಗೊಳಿಸಲು ಹಾಲಿ ಆಹ್ವಾನಿಸಿರುವ ಟೆಂಡರ್‌ನ್ನು ರದ್ದುಪಡಿಸುವುದು ಅತೀ ಸೂಕ್ತವಾಗಿರುತ್ತದೆ. ಪ್ರಸ್ತಾಪಿತ ಟೆಂಡರ್‌ನಲ್ಲಿ ಕಾಣಿಸಿದ ಅಂಶಗಳು ಅವೈಜ್ಞಾನಿಕವಾಗಿದ್ದು, ಮಾತ್ರವಲ್ಲದೆ ಅವೈಜ್ಞಾನಿಕ ರೀತಿಯಿಂದ ಕರೆದಿರುವ ಟೆಂಡರ್‌ನಲ್ಲಿ ಭಾಗವಹಿಸಿರುವ ಕೆಲವು ಗುತ್ತಿಗೆದಾರರು ಅನಧಿಕೃತ ಜಾಹೀರಾತುದಾರರೊಡನೆ ಶಾಮೀಲಾಗಿರುವುದಾಗಿ ಸಾರ್ವಜನಿಕರಿಂದ ದೂರುಗಳು ಬಂದಿರುತ್ತದೆ. ಸದರಿ ಗುತ್ತಿಗೆದಾರರಿಗೆ ತೆರವು ಕಾರ್ಯಾಚರಣೆಯನ್ನು ಸರಿಯಾಗಿ ನಿರ್ವಹಿಸದೇ ಇರುವ ಕಾರಣ ಸದರಿಯವರಿಗೆ ಸಹಾಯಕ ಆಯುಕ್ತರು(ಜಾಹೀರಾತು)ರವರ ಕಛೇರಿಯಿಂದ ಕಾರಣ ಕೇಳಿ ನೋಟೀಸನ್ನು

ನೀಡಲಾಗಿ, ಸದರಿ ಗುತ್ತಿಗೆದಾರರು ಸಹಾಯಕ ಆಯುಕ್ತರು(ಜಾಹೀರಾತು)ರವರು ಕಾರಣಕೇಳಿ ನೋಟೀಸನ್ನು ನೀಡಲು ಬರುವುದಿಲ್ಲ ಹಾಗೂ ಇನ್ನೊಮ್ಮೆ ನೋಟೀಸ್ ನೀಡಿದ್ದಲ್ಲಿ ನ್ಯಾಯಾಲಯದಲ್ಲಿ ದಾವೆ ಹೂಡುವುದಾಗಿ ಸಹಾಯಕ ಆಯುಕ್ತರಿಗೆ ಎಚ್ಚರಿಕೆ ನೀಡಿರುತ್ತಾರೆ. **(ದಾಖಲೆಯನ್ನು ಪುಟ ಸಂಖ್ಯೆ:34 ರಿಂದ 36 ರವರೆಗೆ ಲಗತ್ತಿಸಿದೆ)** ಇದರಿಂದ ಸಹಾಯಕ ಆಯುಕ್ತರು(ಜಾಹೀರಾತು)ರವರಿಗೆ ಖಾಸಗೀ ಗುತ್ತಿಗೆದಾರರ ಮೇಲೆ ಯಾವುದೇ ರೀತಿಯ ಹಿಡಿತವಿರುವುದಿಲ್ಲ ಹಾಗೂ ಕಾರ್ಯಪಾಲಕ ಅಭಿಯಂತರರು ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಮೇಲೆ ಯಾವುದೇ ಹಿಡಿತವಿರುವುದಿಲ್ಲ. ಆದ ಕಾರಣ ಜಾಹೀರಾತು ವಿಭಾಗಕ್ಕೆ ಸಮರ್ಪಕವಾಗಿ ಕಾರ್ಯನಿರ್ವಹಿಸುವ ಕಾರ್ಯಪಾಲಕ ಅಭಿಯಂತರರು ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರನ್ನು ನಿಯೋಜಿಸಿ, ಸಹಾಯಕ ಆಯುಕ್ತರು(ಜಾಹೀರಾತು)ರವರ ಅಧೀನದಲ್ಲಿ ಕಾರ್ಯನಿರ್ವಹಿಸಿ, ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳುವ ಕುರಿತು ಸೂಕ್ತ ಆದೇಶವನ್ನು ಕೋರಿದೆ. ಈ ಹಿಂದೆ ಸಹಾಯಕ ಆಯುಕ್ತರ ಅಧೀನದಲ್ಲಿ ಕಾರ್ಯಪಾಲಕ ಅಭಿಯಂತರರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು ಕಾರ್ಯನಿರ್ವಹಿಸುತ್ತಿದ್ದರು.

ಆದುದರಿಂದ, ಪಾಲಿಕೆ ವ್ಯಾಪ್ತಿಯಲ್ಲಿರುವ ಅನಧಿಕೃತ ಜಾಹೀರಾತುಗಳನ್ನು ತೆರವುಗೊಳಿಸಲು ಬೇರೆ ಗುತ್ತಿಗೆದಾರರನ್ನು ನಿಯೋಜಿಸಿಕೊಳ್ಳುವ ಕುರಿತು ಮಾನ್ಯ ಆಡಳಿತಗಾರರ ಟಿಪ್ಪಣಿ ನಿರ್ದೇಶನದಂತೆ Piece-work ಆಧರಿಸಿ ಕ್ರಮವಹಿಸುವ ನಿಟ್ಟಿನಲ್ಲಿ ರೂ.1 ಲಕ್ಷಕ್ಕಿಂತ ಕೆಳಗಿನ ಮೊತ್ತಕ್ಕೆ ಕೊಟೇಷನ್ ಕರೆದು Piece-work ಆಧರಿಸಿ, ಕ್ರಮವಹಿಸಿದಲ್ಲಿ ಕನಿಷ್ಠ ಪಕ್ಷ Tender finalization ಆಗುವವರೆಗಾದರೂ ಅನಧಿಕೃತ ಜಾಹೀರಾತುಗಳ ತೆರವಿಗೆ ಕ್ರಮವಹಿಸಬಹುದಾಗಿರುತ್ತದೆ. ಅಲ್ಲದೆ, ಸರ್ಕಾರದ ಆದೇಶದಂತೆ ಅನಧಿಕೃತ ಜಾಹೀರಾತುಗಳನ್ನು ತಕ್ಷಣ ತೆರವುಗೊಳಿಸಬೇಕಾಗಿರುವುದರಿಂದ, ಅನಧಿಕೃತ ಜಾಹೀರಾತುಗಳ ತೆರವಿಗಾಗಿ ಹಾಲಿ ಪಾಲಿಕೆಯ ಆಯವ್ಯಯದಲ್ಲಿ 130 ಲಕ್ಷ ರೂ.ಗಳನ್ನು ಕಾಯ್ದಿರಿಸಲಾಗಿದ್ದು, ಸದರಿ ಮೊತ್ತವನ್ನು ಅನಧಿಕೃತ ಜಾಹಿರಾತುಗಳ ತೆರವಿಗೆ ಉಪಯೋಗಿಸಿಕೊಳ್ಳುವ ಕುರಿತು ತುರ್ತು ಆದೇಶಕ್ಕಾಗಿ 36 ಪುಟಗಳ ದಾಖಲೆಗಳೊಂದಿಗೆ ಮಾನ್ಯರ ಘನ ಅವಗಾಹನೆಗಾಗಿ ಸಲ್ಲಿಸಿದೆ.

**ವಂದನೆಗಳೊಂದಿಗೆ,**

**ತಮ್ಮ ವಿಶ್ವಾಸಿ,**

**(ಕೆ.ಮಥಾಯಿ)**
**ಸಹಾಯಕ ಆಯುಕ್ತರು(ಜಾಹೀರಾತು)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**

**ಪ್ರತಿಯನ್ನು:**

1. ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ ರವರ ಘನ ಅವಗಾಹನೆಗಾಗಿ ಸಲ್ಲಿಸಿದೆ.
2. ಅಪರ(ಆಯುಕ್ತರು)ಜಾಹೀರಾತು ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಕಛೇರಿ ಕಡತಕ್ಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
# BRUHAT BANGALORE MAHANAGARA PALIKE

ಸಹಾಯಕ ಆಯುಕ್ತರು (ಜಾಹೀರಾತು) ರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು–02.

ಸಂಖ್ಯೆ:ಸ.ಆ.(ಜಾ)ಪಿಆರ್/2693/13–14 ದಿನಾಂಕ:05.02.2014

## ಕಾರ್ಯಾದೇಶ

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತ/ಕಾನೂನುಬಾಹಿರ ಜಾಹೀರಾತುಗಳನ್ನು ತೆರವುಗೊಳಿಸುವ ಕುರಿತು.

ಉಲ್ಲೇಖ: ಮೆ॥ ಎಂ.ಎಫ್.ಟ್ರೇಡ್‌ಲಿಂಕ್ಸ್, ರವರ ಮನವಿ ದಿನಾಂಕ:31.12.2013, 01.02.2014

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಿತ ಮನವಿಯಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತ/ಕಾನೂನು ಬಾಹಿರವಾಗಿ ಅಳವಡಿಸಿರುವ ವಿವಿಧ ರೀತಿಯ ಜಾಹೀರಾತುಗಳನ್ನು ಪಾಲಿಕೆಗೆ ಆರ್ಥಿಕವಾಗಿ ಹೊರೆಯಾಗದಂತೆ ಉಚಿತವಾಗಿ ತೆರವು ಕಾರ್ಯಾಚರಣೆಯನ್ನು ನಡೆಸುವುದಾಗಿ ಮೆ॥ ಎಂ.ಎಫ್.ಟ್ರೇಡ್‌ಲಿಂಕ್ಸ್, ಸಂಸ್ಥೆಯವರು ಕೋರಿಕೆ ಸಲ್ಲಿಸಿರುತ್ತಾರೆ.

ಈ ಬಗ್ಗೆ ಪರಿಶೀಲಿಸಿ, ಪಾಲಿಕೆ ವ್ಯಾಪ್ತಿಯ ಮಹದೇವಪುರ ವಲಯದಲ್ಲಿರುವ ಅನಧಿಕೃತ ಜಾಹೀರಾತು ಫಲಕಗಳನ್ನು ಸದರಿ ವಲಯದ ಸಹಾಯಕ ಕಂದಾಯ ಅಧಿಕಾರಿ (ಜಾಹೀರಾತು) ರವರ ನೇತೃತ್ವದಲ್ಲಿ ತೆರವುಗೊಳಿಸಿ, ತೆರವುಗೊಳಿಸಿರುವ ಸಾಮಗ್ರಿಗಳನ್ನು ತಾವೇ ತೆಗೆದುಕೊಂಡು ಹೋಗುವಂತೆ ಹಾಗೂ ಅನಧಿಕೃತ ಜಾಹೀರಾತು ಫಲಕಗಳಿಗೆ ದಂಡ ವಿಧಿಸಿ ಪಾಲಿಕೆಗೆ ಆರ್ಥಿಕವಾಗಿ ಹೊರೆಯಾಗದಂತೆ ಮುಂದೆ ವಿಧಿಸಿರುವ ನಿಬಂಧನೆಗಳ ಅನುಸಾರವಾಗಿ ತೆರವು ಕಾರ್ಯಾಚರಣೆ ನಡೆಸಲು ಮೆ॥ ಎಂ.ಎಫ್.ಟ್ರೇಡ್‌ಲಿಂಕ್ಸ್, ಸಂಸ್ಥೆಯವರಿಗೆ ಪ್ರಾಯೋಗಿಕವಾಗಿ 3 ತಿಂಗಳವರೆಗೆ ನಡೆಸಲು ಈ ಕಾರ್ಯಾದೇಶ ನೀಡಲಾಗಿದೆ.

ಸದರಿ ಕಾರ್ಯಾಚರಣೆಯನ್ನು ಮಹದೇವಪುರ ವಲಯದ ಈ ಕೆಳಕಂಡ ತಂಡದ ನೇತೃತ್ವದಲ್ಲಿ ಕಾರ್ಯ ನಿರ್ವಹಿಸತಕ್ಕದ್ದು.

1. ಮಹದೇವಪುರ ವಲಯಕ್ಕೆ ಸಂಬಂಧಿಸಿದಂತೆ:–
   - ಅ) ಸಹಾಯಕ ಕಂದಾಯ ಅಧಿಕಾರಿಗಳು/ ಕಂದಾಯ ಅಧಿಕಾರಿಗಳು (ಜಾಹೀರಾತು)
   - ಆ) ಕಂದಾಯ ಪರಿವೀಕ್ಷಕರು
   - ಇ) ಕಂದಾಯ ವಸೂಲಿಗಾರರು

ಸದರಿ ಕಾರ್ಯಾಚರಣೆಯನ್ನು ಈ ಕೆಳಕಂಡ ಷರತ್ತುಗಳನ್ವಯ ನಿರ್ವಹಿಸತಕ್ಕದ್ದು.

1. ನಿಮ್ಮ ಸಂಸ್ಥೆಯವರು ಸದರಿ ಕಾರ್ಯಾಚರಣೆಯನ್ನು ಸಹಾಯಕ ಕಂದಾಯ ಅಧಿಕಾರಿಗಳು / ಕಂದಾಯ ಅಧಿಕಾರಿಗಳು ಅವರ ಮಾರ್ಗದರ್ಶನದಂತೆ ಕಾರ್ಯಾಚರಣೆಯನ್ನು ನಿಗಧಿಪಡಿಸಿದ ವಲಯದಲ್ಲಿ ಮಾತ್ರ ನಡೆಸುವುದು.
2. ಅನಧಿಕೃತ/ನಿಯಮಬಾಹಿರ ಜಾಹೀರಾತು ಫಲಕಗಳನ್ನು ತೆರವುಗೊಳಿಸುವುದು.
3. ಅನಧಿಕೃತ/ನಿಯಮಬಾಹಿರ ಜಾಹೀರಾತು ಫಲಕಗಳನ್ನು ಆಯಾ ವಲಯದ ಸಹಾಯಕ ಕಂದಾಯ ಅಧಿಕಾರಿಗಳು ಗುರುತಿಸಿದ ನಂತರ ಸದರಿ ಸಂಸ್ಥೆಯವರು ಕಾರ್ಯಾಚರಣೆ ನಡೆಸತಕ್ಕದ್ದು. ತೆರವುಗೊಳಿಸಿದ ಅನಧಿಕೃತ ಜಾಹೀರಾತು ಸಾಮಗ್ರಿಗಳನ್ನು ನಿಯಮಾನುಸಾರ ತಮ್ಮ ವಶಕ್ಕೆ ಪಡೆದುಕೊಳ್ಳುವುದು ಹಾಗೂ ಅನಧಿಕೃತ ಜಾಹೀರಾತುಗಳಿಗೆ ಸಹಾಯಕ ಕಂದಾಯ ಅಧಿಕಾರಿಗಳು ದಂಡ ವಿಧಿಸಲು ಕ್ರಮ ಕೈಗೊಳ್ಳುವುದು. ದಂಡವನ್ನು ಲೆಕ್ಕಾಚಾರ ಮಾಡುವಾಗ ಸಹಾಯಕ ಕಂದಾಯ ಅಧಿಕಾರಿಗಳು ಜಾಹೀರಾತು ಬೈಲಾ ಅಡಿ ನಿಯಮಾನುಸಾರ ವಿಧಿಸಲು ಕ್ರಮ ಕೈಗೊಳ್ಳುವುದು.
4. ನ್ಯಾಯಾಲಯದಲ್ಲಿ ದಾವೆ ಹೂಡಿರುವ ಫಲಕಗಳ ಕುರಿತು ಖಚಿತ ಪಡಿಸಿಕೊಂಡು ನಂತರ ತೆರವುಗೊಳಿಸುವುದು.
5. ಸ್ವ–ಜಾಹೀರಾತು ಫಲಕಗಳಿಗೆ ಅನುಮತಿ ಪಡೆದು ವಾಣಿಜ್ಯ ಜಾಹೀರಾತು ಫಲಕ ಅಳವಡಿಸಿದ್ದಲ್ಲಿ/ನಿಯಮಾನುಸಾರ ಕ್ರಮ ಜರುಗಿಸಿ ತೆರವುಗೊಳಿಸತಕ್ಕದ್ದು.
6. ಬ್ಯಾನರ್, ಬಂಟಿಂಗ್ಸ್, ಕಟೌಟ್ಸ್‌ಗಳು, ಪೋಸ್ಟರ್‌ಗಳು, ಮರ ವಿದ್ಯುತ್ ಕಂಬಗಳ ಮೇಲಿರುವ ಜಾಹೀರಾತುಗಳನ್ನು ತೆರವುಗೊಳಿಸತಕ್ಕದ್ದು.

7. ಯಾವುದೇ ರೀತಿಯ ಜಾಹೀರಾತು ಬೈಲಾ ಉಲ್ಲಂಘನೆ ಪ್ರಕರಣಗಳನ್ನು ಕೂಡಾ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಗಳು ಗುರುತಿಸಿದ ನಂತರ ಸಂಸ್ಥೆಯವರು ಅವುಗಳನ್ನು ತೆರವುಗೊಳಿಸತಕ್ಕದ್ದು.
8. ಸದರಿ ತೆರವು ಕಾರ್ಯಾಚರಣೆಯ ಕುರಿತು 15 ದಿನಗಳಿಗೊಮ್ಮೆ ಪ್ರಗತಿ ಪರಿಶೀಲನಾ ಕುರಿತ ಸಭೆಯನ್ನು ಕೇಂದ್ರ ಕ್ಛೇರಿ ಅಥವಾ ವಲಯ ಕಛೇರಿಯಲ್ಲಿ ನಡೆಸುವಾಗ ತೆರವು ಕಾರ್ಯಾಚರಣೆಯ ಸಂಪೂರ್ಣ ವರದಿಯನ್ನು ಭಾವಚಿತ್ರದೊಂದಿಗೆ ಸಲ್ಲಿಸತಕ್ಕದ್ದು.
9. ಸರ್ಕಾರಿ ಸ್ವತ್ತುಗಳ ಮೇಲಿನ ಜಾಹೀರಾತುಗಳ ಕುರಿತು ಕೇಂದ್ರ ಕಛೇರಿಯಿಂದ ಮಾಹಿತಿ ಪಡೆದು ಉಲ್ಲಂಘನೆ/ಅನಧಿಕೃತವಾದಲ್ಲಿ ಮಾತ್ರ ನಿಯಮಾನುಸಾರ ತೆರವುಗೊಳಿಸತಕ್ಕದ್ದು.
10. ಸದರಿ ಕಾರ್ಯಾಚರಣೆಯನ್ನು ಸ್ಥಳೀಯ ಪೊಲೀಸ್ ಭದ್ರತೆ ಪಡೆದು ತೆರವು ಕಾರ್ಯಾಚರಣೆ ನಡೆಸತಕ್ಕದ್ದು. ಯಾವುದೇ ತೊಂದರೆ ಉಂಟಾದಲ್ಲಿ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸುವ ಕಾರ್ಯವನ್ನು ವಲಯದ ಸಹಾಯಕ ಕಂದಾಯ ಅಧಿಕಾರಿಗಳು ನಿರ್ವಹಿಸತಕ್ಕದ್ದು.
11. ತೆರವು ಕಾರ್ಯಾಚರಣೆ ಮುಗಿದ ನಂತರ / 3 ತಿಂಗಳ ನಂತರ ಸಂಬಂಧಪಟ್ಟ ವಲಯದ ಸಹಾಯಕ ಕಂದಾಯ ಅಧಿಕಾರಿಗಳು/ಕಂದಾಯ ಅಧಿಕಾರಿಗಳು ತಮ್ಮ ವಲಯಗಳಲ್ಲಿ ಯಾವುದೇ ಅನಧಿಕೃತ/ನಿಯಮಬಾಹಿರ ಜಾಹೀರಾತು ಫಲಕಗಳು ಇಲ್ಲವೆಂದು ಲಿಖಿತ ಮೂಲಕ ಹೇಳಿಕೆಯನ್ನು ಸಹಾಯಕ ಆಯುಕ್ತರು (ಜಾಹೀರಾತು) ಕೇಂದ್ರ ಕಛೇರಿಗೆ ಸಲ್ಲಿಸತಕ್ಕದ್ದು.
12. ಮುಂದೆ ಯಾವುದಾದರೂ ಅನಧಿಕೃತ ಜಾಹೀರಾತುಗಳು ಇದ್ದಲ್ಲಿ ಅದಕ್ಕೆ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಯವರೇ ನೇರ ಜವಾಬ್ದಾರರಾಗಿರುತ್ತಾರೆ.
13. ಸದರಿ ಕಾರ್ಯಾದೇಶವನ್ನು ಯಾವುದೇ ಹಂತದಲ್ಲಿ ರದ್ದುಪಡಿಸುವ ಅಥವಾ ಮುಂದುವರೆಸುವ ಬಗ್ಗೆ ಅಂತಿಮ ತೀರ್ಮಾನವನ್ನು ಮಾನ್ಯ ಆಯುಕ್ತರು ಹೊಂದಿರುತ್ತಾರೆ.

ಈ ಮೇಲ್ಕಂಡ ತೆರವು ಕಾರ್ಯಾಚರಣೆಯನ್ನು ದಿನಾಂಕ: 20/2/14 ದಿಂದ 19/5/14 ವರೆಗೆ ನಡೆಸಲು ಈ ಕಾರ್ಯಾದೇಶವನ್ನು ನೀಡಲಾಗಿದೆ.

–ಸಹಿ–
ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಗೆ,
ಮೆ॥ ಎಂ.ಎಫ್.ಟ್ರೇಡ್ ಲಿಂಕ್,
ನಂ.72 & 73, ನಾಗದೇವನಹಳ್ಳಿ, 1ನೇ ಬ್ಲಾಕ್,
ವಿಶ್ವೇಶ್ವರಯ್ಯ ಲೇಔಟ್, ಜ್ಞಾನಭಾರತಿ ಪೋಸ್ಟ್,
ಬೆಂಗಳೂರು–560 056.

ಪ್ರತಿಯನ್ನು:–
1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು, ಆಪ್ತ ಕಾರ್ಯದರ್ಶಿಯವರಿಗೆ ಸಲ್ಲಿಸಿದೆ.
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು, ಆಪ್ತ ಕಾರ್ಯದರ್ಶಿಯವರಿಗೆ ಸಲ್ಲಿಸಿದೆ.
3. ಮಾನ್ಯ ಆಯುಕ್ತರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮಾನ್ಯ ಅಪರ ಆಯುಕ್ತರು (ಜಾಹೀರಾತು) ರವರ ಅವಗಾಹನೆಗೆ ಸಲ್ಲಿಸಿದೆ.
6. ಕೌನ್ಸಿಲ್ ಕಾರ್ಯದರ್ಶಿಯವರ ಅವಗಾಹನೆಗೆ ತರಲು, ಆಪ್ತ ಕಾರ್ಯದರ್ಶಿಯವರಿಗೆ ಸಲ್ಲಿಸಿದೆ.
7. ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅಧ್ಯಕ್ಷರವರ ಅವಗಾಹನೆಗೆ ಸಲ್ಲಿಸಿದೆ.
8. ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿರವರ ಅವಗಾಹನೆಗೆ ಸಲ್ಲಿಸಿದೆ.
9. ಅಪೀಲು ಸ್ಥಾಯಿ ಸಮಿತಿಯವರ ಅವಗಾಹನೆಗೆ ಸಲ್ಲಿಸಿದೆ.
10. ಎಲ್ಲಾ ವಲಯದ ಅಪರ/ಜಂಟಿ ಆಯುಕ್ತರುಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11. ಕಛೇರಿ ಕಡತಕ್ಕೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

Kaleem-macci
9342803780
Syed Raziq

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

# BRUHAT BANGALORE MAHANAGARA PALIKE

ಸಹಾಯಕ ಆಯುಕ್ತರು (ಜಾಹೀರಾತು) ರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು–02.

ಸಂಖ್ಯೆ:ಸ.ಆ.(ಜಾ)ಪಿಆರ್/2690/13–14 ದಿನಾಂಕ:05.02.2014

## ಕಾರ್ಯಾದೇಶ

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತ/ಕಾನೂನುಬಾಹಿರ ಜಾಹೀರಾತುಗಳನ್ನು ತೆರವುಗೊಳಿಸುವ ಕುರಿತು.

ಉಲ್ಲೇಖ: ಮೆ|| ಎಂ.ಡಿ.ಸ್ಟೀಲ್ಸ್., ರವರ ಮನವಿ ದಿನಾಂಕ:04.02.2014 ಹಾಗೂ 28.01.2014

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಿತ ಮನವಿಯಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತ/ನಿಯಮಬಾಹಿರವಾಗಿ ಅಳವಡಿಸಿರುವ ವಿವಿಧ ರೀತಿಯ ಜಾಹೀರಾತುಗಳನ್ನು ಪಾಲಿಕೆಗೆ ಆರ್ಥಿಕವಾಗಿ ಹೊರೆಯಾಗದಂತೆ ಉಚಿತವಾಗಿ ತೆರವು ಕಾರ್ಯಾಚರಣೆಯನ್ನು ನಡೆಸುವುದಾಗಿ ಮೆ|| ಎಂ.ಡಿ.ಸ್ಟೀಲ್ಸ್., ಸಂಸ್ಥೆಯವರು ಕೋರಿಕೆ ಸಲ್ಲಿಸಿರುತ್ತಾರೆ.

ಈ ಬಗ್ಗೆ ಪರಿಶೀಲಿಸಿ, ಪಾಲಿಕೆ ವ್ಯಾಪ್ತಿಯ ರಾಜರಾಜೇಶ್ವರಿನಗರ ವಲಯದಲ್ಲಿರುವ ಅನಧಿಕೃತ ಜಾಹೀರಾತು ಫಲಕಗಳನ್ನು ಸದರಿ ವಲಯದ ಸಹಾಯಕ ಕಂದಾಯ ಅಧಿಕಾರಿ (ಜಾಹೀರಾತು) ರವರ ನೇತೃತ್ವದಲ್ಲಿ ತೆರವುಗೊಳಿಸಿ, ತೆರವುಗೊಳಿಸಿರುವ ಸಾಮಗ್ರಿಗಳನ್ನು ತಾವೇ ತೆಗೆದುಕೊಂಡು ಹೋಗುವಂತೆ ಹಾಗೂ ಅನಧಿಕೃತ ಜಾಹೀರಾತು ಫಲಕಗಳಿಗೆ ದಂಡ ವಿಧಿಸಿ ಪಾಲಿಕೆಗೆ ಆರ್ಥಿಕವಾಗಿ ಹೊರೆಯಾಗದಂತೆ ಮುಂದೆ ವಿಧಿಸಿರುವ ನಿಬಂಧನೆಗಳ ಅನುಸಾರವಾರವಾಗಿ ತೆರವು ಕಾರ್ಯಾಚರಣೆ ನಡೆಸಲು ಮೆ|| ಎಂ.ಡಿ.ಸ್ಟೀಲ್ಸ್., ಸಂಸ್ಥೆಯವರಿಗೆ ಪ್ರಾಯೋಗಿಕವಾಗಿ 3 ತಿಂಗಳವರೆಗೆ ನಡೆಸಲು ಈ ಕಾರ್ಯಾದೇಶ ನೀಡಲಾಗಿದೆ.

**ಸದರಿ ಕಾರ್ಯಾಚರಣೆಯನ್ನು ರಾಜರಾಜೇಶ್ವರಿನಗರ ವಲಯದ ಈ ಕೆಳಕಂಡ ತಂಡದ ನೇತೃತ್ವದಲ್ಲಿ ಕಾರ್ಯ ನಿರ್ವಹಿಸತಕ್ಕದ್ದು. ರಾಜರಾಜೇಶ್ವರಿನಗರ ವಲಯಕ್ಕೆ ಸಂಬಂಧಿಸಿದಂತೆ:-**

**ಅ) ಸಹಾಯಕ ಕಂದಾಯ ಅಧಿಕಾರಿಗಳು/ ಕಂದಾಯ ಅಧಿಕಾರಿಗಳು (ಜಾಹೀರಾತು)**
**ಆ) ಕಂದಾಯ ಪರಿವೀಕ್ಷಕರು**
**ಇ) ಕಂದಾಯ ವಸೂಲಿಗಾರರು**

**ಸದರಿ ಕಾರ್ಯಾಚರಣೆಯನ್ನು ಈ ಕೆಳಕಂಡ ಷರತ್ತುಗಳನ್ವಯ ನಿರ್ವಹಿಸತಕ್ಕದ್ದು.**

1. ನಿಮ್ಮ ಸಂಸ್ಥೆಯವರು ಸದರಿ ಕಾರ್ಯಚರಣೆಯನ್ನು ಸಹಾಯಕ ಕಂದಾಯ ಅಧಿಕಾರಿಗಳು / ಕಂದಾಯ ಅಧಿಕಾರಿಗಳು ಅವರ ಮಾರ್ಗದರ್ಶನದಂತೆ ಕಾರ್ಯಾಚರಣೆಯನ್ನು ನಿಗದಿಪಡಿಸಿದ ವಲಯದಲ್ಲಿ ಮಾತ್ರ ನಡೆಸುವುದು.
2. ಅನಧಿಕೃತ/ನಿಯಮಬಾಹಿರ ಜಾಹೀರಾತು ಫಲಕಗಳನ್ನು ತೆರವುಗೊಳಿಸುವುದು.
3. ಅನಧಿಕೃತ/ನಿಯಮಬಾಹಿರ ಜಾಹೀರಾತು ಫಲಕಗಳನ್ನು ಆಯಾ ವಲಯದ ಸಹಾಯಕ ಕಂದಾಯ ಅಧಿಕಾರಿಗಳು ಗುರುತಿಸಿದ ನಂತರ ಸದರಿ ಸಂಸ್ಥೆಯವರು ಕಾರ್ಯಾಚರಣೆ ನಡೆಸತಕ್ಕದ್ದು. ತೆರವುಗೊಳಿಸಿದ ಅನಧಿಕೃತ ಜಾಹೀರಾತು ಸಾಮಗ್ರಿಗಳನ್ನು ನಿಯಮಾನುಸಾರ ತಮ್ಮ ವಶಕ್ಕೆ ಪಡೆದುಕೊಳ್ಳುವುದು ಹಾಗೂ ಅನಧಿಕೃತ ಜಾಹೀರಾತುಗಳಿಗೆ ಸಹಾಯಕ ಕಂದಾಯ ಅಧಿಕಾರಿಗಳು ದಂಡ ವಿಧಿಸಲು ಕ್ರಮ ಕೈಗೊಳ್ಳುವುದು. ದಂಡವನ್ನು ಲೆಕ್ಕಾಚಾರ ಮಾಡುವಾಗ ಸಹಾಯಕ ಕಂದಾಯ ಅಧಿಕಾರಿಗಳು ಜಾಹೀರಾತು ಬೈಲಾ ಅಡಿ ನಿಯಮಾನುಸಾರ ವಿಧಿಸಲು ಕ್ರಮ ಕೈಗೊಳ್ಳುವುದು.
4. ನ್ಯಾಯಾಲಯದಲ್ಲಿ ದಾವೆ ಹೂಡಿರುವ ಫಲಕಗಳ ಕುರಿತು ಖಚಿತ ಪಡಿಸಿಕೊಂಡು ನಂತರ ತೆರವುಗೊಳಿಸುವುದು.
5. ಸ್ವ-ಜಾಹೀರಾತು ಫಲಕಗಳಿಗೆ ಅನುಮತಿ ಪಡೆದು ವಾಣಿಜ್ಯ ಜಾಹೀರಾತು ಫಲಕ ಅಳವಡಿಸಿದ್ದಲ್ಲಿ/ನಿಯಮಾನುಸಾರ ಕ್ರಮ ಜರುಗಿಸಿ ತೆರವುಗೊಳಿಸತಕ್ಕದ್ದು.
6. ಬ್ಯಾನರ್, ಬಂಟಿಂಗ್ಸ್, ಕಟೌಟ್ಸ್‌ಗಳು, ಪೋಸ್ಟರ್‌ಗಳು, ಮರ ವಿದ್ಯುತ್ ಕಂಬಗಳ ಮೇಲಿರುವ ಜಾಹೀರಾತುಗಳನ್ನು ತೆರವುಗೊಳಿಸತಕ್ಕದ್ದು.

Syed Tanveer
mobile 9845817869

–2

9/15/02/14

9611780550
Syed Razin

7. ಯಾವುದೇ ರೀತಿಯ ಜಾಹೀರಾತು ಬೈಲಾ ಉಲ್ಲಂಘನೆ ಪ್ರಕರಣಗಳನ್ನು ಕೂಡಾ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಗಳು ಗುರುತಿಸಿದ ನಂತರ ಸಂಸ್ಥೆಯವರು ಅವುಗಳನ್ನು ತೆರವುಗೊಳಿಸತಕ್ಕದ್ದು.
8. ಸದರಿ ತೆರವು ಕಾರ್ಯಾಚರಣೆಯ ಕುರಿತು 15 ದಿನಗಳಿಗೊಮ್ಮೆ ಪ್ರಗತಿ ಪರಿಶೀಲನಾ ಕುರಿತ ಸಭೆಯನ್ನು ಕೇಂದ್ರ ಕಛೇರಿ ಅಥವಾ ವಲಯ ಕಛೇರಿಯಲ್ಲಿ ನಡೆಸುವಾಗ ತೆರವು ಕಾರ್ಯಾಚರಣೆಯ ಸಂಪೂರ್ಣ ವರದಿಯನ್ನು ಭಾವಚಿತ್ರದೊಂದಿಗೆ ಸಲ್ಲಿಸತಕ್ಕದ್ದು.
9. ಸರ್ಕಾರಿ ಸ್ವತ್ತುಗಳ ಮೇಲಿನ ಜಾಹೀರಾತುಗಳ ಕುರಿತು ಕೇಂದ್ರ ಕಛೇರಿಯಿಂದ ಮಾಹಿತಿ ಪಡೆದು ಉಲ್ಲಂಘನೆ/ಅನಧಿಕೃತವಾದಲ್ಲಿ ಮಾತ್ರ ನಿಯಮಾನುಸಾರ ತೆರವುಗೊಳಿಸತಕ್ಕದ್ದು.
10. ಸದರಿ ಕಾರ್ಯಾಚರಣೆಯನ್ನು ಸ್ಥಳೀಯ ಪೊಲೀಸ್ ಭದ್ರತೆ ಪಡೆದು ತೆರವು ಕಾರ್ಯಾಚರಣೆ ನಡೆಸತಕ್ಕದ್ದು. ಯಾವುದೇ ತೊಂದರೆ ಉಂಟಾದಲ್ಲಿ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸುವ ಕಾರ್ಯವನ್ನು ವಲಯದ ಸಹಾಯಕ ಕಂದಾಯ ಅಧಿಕಾರಿಗಳು ನಿರ್ವಹಿಸತಕ್ಕದ್ದು.
11. ತೆರವು ಕಾರ್ಯಾಚರಣೆ ಮುಗಿದ ನಂತರ / 3 ತಿಂಗಳ ನಂತರ ಸಂಬಂಧಪಟ್ಟ ವಲಯದ ಸಹಾಯಕ ಕಂದಾಯ ಅಧಿಕಾರಿಗಳು/ಕಂದಾಯ ಅಧಿಕಾರಿಗಳು ತಮ್ಮ ವಲಯಗಳಲ್ಲಿ ಯಾವುದೇ ಅನಧಿಕೃತ/ನಿಯಮಬಾಹಿರ ಜಾಹೀರಾತು ಫಲಕಗಳು ಇಲ್ಲವೆಂದು ಲಿಖಿತ ಮೂಲಕ ಹೇಳಿಕೆಯನ್ನು ಸಹಾಯಕ ಆಯುಕ್ತರು (ಜಾಹೀರಾತು) ಕೇಂದ್ರ ಕಛೇರಿಗೆ ಸಲ್ಲಿಸತಕ್ಕದ್ದು.
12. ಮುಂದೆ ಯಾವುದಾದರೂ ಅನಧಿಕೃತ ಜಾಹೀರಾತುಗಳು ಇದ್ದಲ್ಲಿ ಅದಕ್ಕೆ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಯವರೇ ನೇರ ಜವಾಬ್ದಾರರಾಗಿರುತ್ತಾರೆ.
13. ಸದರಿ ಕಾರ್ಯಾದೇಶವನ್ನು ಯಾವುದೇ ಹಂತದಲ್ಲಿ ರದ್ದುಪಡಿಸುವ ಅಥವಾ ಮುಂದುವರೆಸುವ ಬಗ್ಗೆ ಅಂತಿಮ ತೀರ್ಮಾನವನ್ನು ಮಾನ್ಯ ಆಯುಕ್ತರು ಹೊಂದಿರುತ್ತಾರೆ.

ಈ ಮೇಲ್ಕಂಡ ತೆರವು ಕಾರ್ಯಾಚರಣೆಯನ್ನು ದಿನಾಂಕ: 17-2-14 ರಿಂದ 16-5-2014 ವರೆಗೆ ನಡೆಸಲು ಈ ಕಾರ್ಯಾದೇಶವನ್ನು ನೀಡಲಾಗಿದೆ.

-ಸಹಿ-
ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಗೆ,
ಮೆ|| ಎಂ.ಡಿ.ಸ್ಟೀಲ್ಸ್,
ನಂ.1441, "ಕಾಮದೇನು",
2ನೇ ಅಡ್ಡರಸ್ತೆ, 1ನೇ ಹಂತ,
2ನೇ ಘಟ್ಟ, ಚಂದ್ರಾ ಬಡಾವಣೆ,
ಬೆಂಗಳೂರು-560 039.

ಪ್ರತಿಯನ್ನು:-
1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು, ಆಪ್ತ ಕಾರ್ಯದರ್ಶಿಯವರಿಗೆ ಸಲ್ಲಿಸಿದೆ.
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು, ಆಪ್ತ ಕಾರ್ಯದರ್ಶಿಯವರಿಗೆ ಸಲ್ಲಿಸಿದೆ.
3. ಮಾನ್ಯ ಆಯುಕ್ತರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮಾನ್ಯ ಅಪರ ಆಯುಕ್ತರು (ಜಾಹೀರಾತು) ರವರ ಅವಗಾಹನೆಗೆ ಸಲ್ಲಿಸಿದೆ.
6. ಕೌನ್ಸಿಲ್ ಕಾರ್ಯದರ್ಶಿಯವರ ಅವಗಾಹನೆಗೆ ತರಲು, ಆಪ್ತ ಕಾರ್ಯದರ್ಶಿಯವರಿಗೆ ಸಲ್ಲಿಸಿದೆ.
7. ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅಧ್ಯಕ್ಷರವರ ಅವಗಾಹನೆಗೆ ಸಲ್ಲಿಸಿದೆ.
8. ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿರವರ ಅವಗಾಹನೆಗೆ ಸಲ್ಲಿಸಿದೆ.
9. ಅಪೀಲು ಸ್ಥಾಯಿ ಸಮಿತಿಯವರ ಅವಗಾಹನೆಗೆ ಸಲ್ಲಿಸಿದೆ.
10. ಎಲ್ಲಾ ವಲಯದ ಅಪರ/ಜಂಟಿ ಆಯುಕ್ತರುಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11. ಕಛೇರಿ ಕಡತಕ್ಕೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## BRUHAT BANGALORE MAHANAGARA PALIKE

ಸಹಾಯಕ ಆಯುಕ್ತರು (ಜಾಹೀರಾತು) ರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು-02.

ಸಂಖ್ಯೆ:ಸ.ಆ.(ಜಾ)ಪಿಆರ್/2692/13-14 ದಿನಾಂಕ:05.02.2014

### ಕಾರ್ಯಾದೇಶ

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತ/ಕಾನೂನುಬಾಹಿರ ಜಾಹೀರಾತುಗಳನ್ನು ತೆರವುಗೊಳಿಸುವ ಕುರಿತು.

ಉಲ್ಲೇಖ: ಮೆ|| ಸನ್‌ರೈಸ್ ಎಂಟರ್‌ಪ್ರೈಸಸ್., ರವರ ಮನವಿ ದಿನಾಂಕ:04.02.2014 ಹಾಗೂ 28.01.2014

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಿತ ಮನವಿಯಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತ/ನಿಯಮಬಾಹಿರವಾಗಿ ಅಳವಡಿಸಿರುವ ವಿವಿಧ ರೀತಿಯ ಜಾಹೀರಾತುಗಳನ್ನು ಪಾಲಿಕೆಗೆ ಆರ್ಥಿಕವಾಗಿ ಹೊರೆಯಾಗದಂತೆ ಉಚಿತವಾಗಿ ತೆರವು ಕಾರ್ಯಾಚರಣೆಯನ್ನು ನಡೆಸುವುದಾಗಿ ಮೆ|| ಸನ್‌ರೈಸ್ ಎಂಟರ್‌ಪ್ರೈಸಸ್., ಸಂಸ್ಥೆಯವರು ಕೋರಿಕೆ ಸಲ್ಲಿಸಿರುತ್ತಾರೆ.

ಈ ಬಗ್ಗೆ ಪರಿಶೀಲಿಸಿ, ಪಾಲಿಕೆ ವ್ಯಾಪ್ತಿಯ ಯಲಹಂಕ ವಲಯದಲ್ಲಿರುವ ಅನಧಿಕೃತ ಜಾಹೀರಾತು ಫಲಕಗಳನ್ನು ಸದರಿ ವಲಯದ ಸಹಾಯಕ ಕಂದಾಯ ಅಧಿಕಾರಿ (ಜಾಹೀರಾತು) ರವರ ನೇತೃತ್ವದಲ್ಲಿ ತೆರವುಗೊಳಿಸಿ, ತೆರವುಗೊಳಿಸಿರುವ [redacted] ಆರ್ಥಿಕವಾಗಿ ಹೊರೆಯಾಗದಂತೆ ಮುಂದೆ ವಿಧಿಸುವ ನಿಬಂಧನೆಗಳ ಅನುಸಾರವಾಗಿ ತೆರವು ಕಾರ್ಯಾಚರಣೆ ನಡೆಸಲು ಮೆ|| ಸನ್‌ರೈಸ್ ಎಂಟರ್‌ಪ್ರೈಸಸ್., ಸಂಸ್ಥೆಯವರಿಗೆ ಪ್ರಾಯೋಗಿಕವಾಗಿ 3 ತಿಂಗಳವರೆಗೆ ನಡೆಸಲು ಈ ಕಾರ್ಯಾದೇಶ ನೀಡಲಾಗಿದೆ.

ಸದರಿ ಕಾರ್ಯಾಚರಣೆಯನ್ನು ಯಲಹಂಕ ವಲಯದ ಈ ಕೆಳಕಂಡ ತಂಡದ ನೇತೃತ್ವದಲ್ಲಿ ಕಾರ್ಯ ನಿರ್ವಹಿಸತಕ್ಕದ್ದು. ಯಲಹಂಕ ವಲಯಕ್ಕೆ ಸಂಬಂಧಿಸಿದಂತೆ:-

- ಅ) ಸಹಾಯಕ ಕಂದಾಯ ಅಧಿಕಾರಿಗಳು/ ಕಂದಾಯ ಅಧಿಕಾರಿಗಳು (ಜಾಹೀರಾತು)
- ಆ) ಕಂದಾಯ ಪರಿವೀಕ್ಷಕರು
- ಇ) ಕಂದಾಯ ವಸೂಲಿಗಾರರು

ಸದರಿ ಕಾರ್ಯಾಚರಣೆಯನ್ನು ಈ ಕೆಳಕಂಡ ಷರತ್ತುಗಳನ್ವಯ ನಿರ್ವಹಿಸತಕ್ಕದ್ದು.

1. ನಿಮ್ಮ ಸಂಸ್ಥೆಯವರು ಸದರಿ ಕಾರ್ಯಾಚರಣೆಯನ್ನು ಸಹಾಯಕ ಕಂದಾಯ ಅಧಿಕಾರಿಗಳು / ಕಂದಾಯ ಅಧಿಕಾರಿಗಳು ಅವರ ಮಾರ್ಗದರ್ಶನದಂತೆ ಕಾರ್ಯಾಚರಣೆಯನ್ನು ನಿಗಧಿಪಡಿಸಿದ ವಲಯದಲ್ಲಿ ಮಾತ್ರ ನಡೆಸುವುದು.
2. ಅನಧಿಕೃತ/ನಿಯಮಬಾಹಿರ ಜಾಹೀರಾತು ಫಲಕಗಳನ್ನು ತೆರವುಗೊಳಿಸುವುದು.
3. ಅನಧಿಕೃತ/ನಿಯಮಬಾಹಿರ ಜಾಹೀರಾತು ಫಲಕಗಳನ್ನು ಆಯಾ ವಲಯದ ಸಹಾಯಕ ಕಂದಾಯ ಅಧಿಕಾರಿಗಳು ಗುರುತಿಸಿದ ನಂತರ ಸದರಿ ಸಂಸ್ಥೆಯವರು ಕಾರ್ಯಾಚರಣೆ ನಡೆಸತಕ್ಕದ್ದು. ತೆರವುಗೊಳಿಸಿದ ಅನಧಿಕೃತ ಜಾಹೀರಾತು ಸಾಮಗ್ರಿಗಳನ್ನು ನಿಯಮಾನುಸಾರ ತಮ್ಮ ವಶಕ್ಕೆ ಪಡೆದುಕೊಳ್ಳುವುದು ಹಾಗೂ ಅನಧಿಕೃತ ಜಾಹೀರಾತುಗಳಿಗೆ ಸಹಾಯಕ ಕಂದಾಯ ಅಧಿಕಾರಿಗಳು ದಂಡ ವಿಧಿಸಲು ಕ್ರಮ ಕೈಗೊಳ್ಳುವುದು. ದಂಡವನ್ನು ಲೆಕ್ಕಾಚಾರ ಮಾಡುವಾಗ ಸಹಾಯಕ ಕಂದಾಯ ಅಧಿಕಾರಿಗಳು ಜಾಹೀರಾತು ದೈನಾ ಅಡಿ ನಿಯಮಾನುಸಾರ ವಿಧಿಸಲು ಕ್ರಮ ಕೈಗೊಳ್ಳುವುದು.
4. ನ್ಯಾಯಾಲಯದಲ್ಲಿ ದಾವೆ ಹೂಡಿರುವ ಫಲಕಗಳ ಕುರಿತು ಖಚಿತ ಪಡಿಸಿಕೊಂಡು ನಂತರ ತೆರವುಗೊಳಿಸುವುದು.
5. ಸ್ವ-ಜಾಹೀರಾತು ಫಲಕಗಳಿಗೆ ಅನುಮತಿ ಪಡೆದು ವಾಣಿಜ್ಯ ಜಾಹೀರಾತು ಫಲಕ ಅಳವಡಿಸಿದ್ದಲ್ಲಿ/ನಿಯಮಾನುಸಾರ ಕ್ರಮ ಜರುಗಿಸಿ ತೆರವುಗೊಳಿಸತಕ್ಕದ್ದು.
6. ಬ್ಯಾನರ್, ಬಂಟಿಂಗ್ಸ್, ಕಟೌಟ್‌ಗಳು, ಪೋಸ್ಟರ್‌ಗಳು, ಮರ ವಿದ್ಯುತ್ ಕಂಬಗಳ ಮೇಲಿರುವ ಜಾಹೀರಾತುಗಳನ್ನು ತೆರವುಗೊಳಿಸತಕ್ಕದ್ದು.

—2

7. ಯಾವುದೇ ರೀತಿಯ ಜಾಹೀರಾತು ಬೈಲಾ ಉಲ್ಲಂಘನೆ ಪ್ರಕರಣಗಳನ್ನು ಕೂಡಾ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಗಳು ಗುರುತಿಸಿದ ನಂತರ ಸಂಸ್ಥೆಯವರು ಅವುಗಳನ್ನು ತೆರವುಗೊಳಿಸತಕ್ಕದ್ದು.
8. ಸದರಿ ತೆರವು ಕಾರ್ಯಾಚರಣೆಯ ಕುರಿತು 15 ದಿನಗಳಿಗೊಮ್ಮೆ ಪ್ರಗತಿ ಪರಿಶೀಲನಾ ಕುರಿತ ಸಭೆಯನ್ನು ಕೇಂದ್ರ ಕಛೇರಿ ಅಥವಾ ವಲಯ ಕಛೇರಿಯಲ್ಲಿ ನಡೆಸುವಾಗ ತೆರವು ಕಾರ್ಯಾಚರಣೆಯ ಸಂಪೂರ್ಣ ವರದಿಯನ್ನು ಭಾವಚಿತ್ರದೊಂದಿಗೆ ಸಲ್ಲಿಸತಕ್ಕದ್ದು.
9. ಸರ್ಕಾರಿ ಸ್ವತ್ತುಗಳ ಮೇಲಿನ ಜಾಹೀರಾತುಗಳ ಕುರಿತು ಕೇಂದ್ರ ಕಛೇರಿಯಿಂದ ಮಾಹಿತಿ ಪಡೆದು ಉಲ್ಲಂಘನೆ/ಅನಧಿಕೃತವಾದಲ್ಲಿ ಮಾತ್ರ ನಿಯಮಾನುಸಾರ ತೆರವುಗೊಳಿಸತಕ್ಕದ್ದು.
10. ಸದರಿ ಕಾರ್ಯಾಚರಣೆಯನ್ನು ಸ್ಥಳೀಯ ಪೊಲೀಸ್ ಭದ್ರತೆ ಪಡೆದು ತೆರವು ಕಾರ್ಯಾಚರಣೆ ನಡೆಸತಕ್ಕದ್ದು. ಯಾವುದೇ ತೊಂದರೆ ಉಂಟಾದಲ್ಲಿ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸುವ ಕಾರ್ಯವನ್ನು ವಲಯದ ಸಹಾಯಕ ಕಂದಾಯ ಅಧಿಕಾರಿಗಳು ನಿರ್ವಹಿಸತಕ್ಕದ್ದು.
11. ತೆರವು ಕಾರ್ಯಾಚರಣೆ ಮುಗಿದ ನಂತರ / 3 ತಿಂಗಳ ನಂತರ ಸಂಬಂಧಪಟ್ಟ ವಲಯದ ಸಹಾಯಕ ಕಂದಾಯ ಅಧಿಕಾರಿಗಳು/ಕಂದಾಯ ಅಧಿಕಾರಿಗಳು ತಮ್ಮ ವಲಯಗಳಲ್ಲಿ ಯಾವುದೇ ಅನಧಿಕೃತ/ನಿಯಮಬಾಹಿರ ಜಾಹೀರಾತು ಫಲಕಗಳು ಇಲ್ಲವೆಂದು ಲಿಖಿತ ಮೂಲಕ ಹೇಳಿಕೆಯನ್ನು ಸಹಾಯಕ ಆಯುಕ್ತರು (ಜಾಹೀರಾತು) ಕೇಂದ್ರ ಕಛೇರಿಗೆ ಸಲ್ಲಿಸತಕ್ಕದ್ದು.
12. ಮುಂದೆ ಯಾವುದಾದರೂ ಅನಧಿಕೃತ ಜಾಹೀರಾತುಗಳು ಇದ್ದಲ್ಲಿ ಅದಕ್ಕೆ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಯವರೇ ನೇರ ಜವಾಬ್ದಾರರಾಗಿರುತ್ತಾರೆ.
13. ಸದರಿ ಕಾರ್ಯಾದೇಶವನ್ನು ಯಾವುದೇ ಹಂತದಲ್ಲಿ ರದ್ದುಪಡಿಸುವ ಅಥವಾ ಮುಂದುವರೆಸುವ ಬಗ್ಗೆ ಅಂತಿಮ ತೀರ್ಮಾನವನ್ನು ಮಾನ್ಯ ಆಯುಕ್ತರು ಹೊಂದಿರುತ್ತಾರೆ.

ಈ ಮೇಲ್ಕಂಡ ತೆರವು ಕಾರ್ಯಾಚರಣೆಯನ್ನು ದಿನಾಂಕ 17/2/14 ರಿಂದ 16/5/14 ವರೆಗೆ ನಡೆಸಲು ಈ ಕಾರ್ಯಾದೇಶವನ್ನು ನೀಡಲಾಗಿದೆ.

-ಸಹಿ-
ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಗೆ,
ಮೆ॥ ಸನ್‌ರೈಸ್ ಎಂಟರ್‌ಪ್ರೈಸಸ್,
ನಂ.33, ರೇವಣ್ಣ ಬಡಾವಣೆ,
ವಿನಾಯಕ ಲೇಔಟ್, ಚಂದ್ರಾಲೇಔಟ್,
ಬೆಂಗಳೂರು-560 039.

ಪ್ರತಿಯನ್ನು:-
1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು, ಆಪ್ತ ಕಾರ್ಯದರ್ಶಿಯವರಿಗೆ ಸಲ್ಲಿಸಿದೆ.
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು, ಆಪ್ತ ಕಾರ್ಯದರ್ಶಿಯವರಿಗೆ ಸಲ್ಲಿಸಿದೆ.
3. ಮಾನ್ಯ ಆಯುಕ್ತರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮಾನ್ಯ ಅಪರ ಆಯುಕ್ತರು (ಜಾಹೀರಾತು) ರವರ ಅವಗಾಹನೆಗೆ ಸಲ್ಲಿಸಿದೆ.
6. ಕೌನ್ಸಿಲ್ ಕಾರ್ಯದರ್ಶಿಯವರ ಅವಗಾಹನೆಗೆ ತರಲು, ಆಪ್ತ ಕಾರ್ಯದರ್ಶಿಯವರಿಗೆ ಸಲ್ಲಿಸಿದೆ.
7. ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅಧ್ಯಕ್ಷರವರ ಅವಗಾಹನೆಗೆ ಸಲ್ಲಿಸಿದೆ.
8. ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿರವರ ಅವಗಾಹನೆಗೆ ಸಲ್ಲಿಸಿದೆ.
9. ಅಪೀಲು ಸ್ಥಾಯಿ ಸಮಿತಿಯವರ ಅವಗಾಹನೆಗೆ ಸಲ್ಲಿಸಿದೆ.
10. ಎಲ್ಲಾ ವಲಯದ ಅಪರ/ಜಂಟಿ ಆಯುಕ್ತರು ಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11. ಕಛೇರಿ ಕಡತಕ್ಕೆ.

Saeed Raziq
9611780550

14/2/14

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## BRUHAT BANGALORE MAHANAGARA PALIKE

ಸಹಾಯಕ ಆಯುಕ್ತರು (ಜಾಹೀರಾತು) ರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು–02.

ಸಂಖ್ಯೆ:ಸ.ಆ.(ಜಾ)ಪಿಆರ್/2691/13–14 ದಿನಾಂಕ:05.02.2014

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಜಾಹೀರಾತು ವಿಭಾಗ ಬೆಂಗಳೂರು

## ಕಾರ್ಯಾದೇಶ

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತ/ಕಾನೂನುಬಾಹಿರ ಜಾಹೀರಾತುಗಳನ್ನು ತೆರವುಗೊಳಿಸುವ ಕುರಿತು.

ಉಲ್ಲೇಖ: ಮೆ॥ ಎಂ.ಎಂ.ಸ್ಟೀಲ್ಸ್., ರವರ ಮನವಿ ದಿನಾಂಕ:04.02.2014 ಹಾಗೂ 28.01.2014

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಿತ ಮನವಿಯಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತ/ನಿಯಮಬಾಹಿರವಾಗಿ ಅಳವಡಿಸಿರುವ ವಿವಿಧ ರೀತಿಯ ಜಾಹೀರಾತುಗಳನ್ನು ಪಾಲಿಕೆಗೆ ಆರ್ಥಿಕವಾಗಿ ಹೊರೆಯಾಗದಂತೆ ಉಚಿತವಾಗಿ ತೆರವು ಕಾರ್ಯಾಚರಣೆಯನ್ನು ನಡೆಸುವುದಾಗಿ ಮೆ॥ ಎಂ.ಎಂ.ಸ್ಟೀಲ್ಸ್., ಸಂಸ್ಥೆಯವರು ಕೋರಿಕೆ ಸಲ್ಲಿಸಿರುತ್ತಾರೆ.

ಈ ಬಗ್ಗೆ ಪರಿಶೀಲಿಸಿ, ಪಾಲಿಕೆ ವ್ಯಾಪ್ತಿಯ ಬೊಮ್ಮನಹಳ್ಳಿ ವಲಯದಲ್ಲಿರುವ ಅನಧಿಕೃತ ಜಾಹೀರಾತು ಫಲಕಗಳನ್ನು ಸದರಿ ವಲಯದ ಸಹಾಯಕ ಕಂದಾಯ ಅಧಿಕಾರಿ (ಜಾಹೀರಾತು) ರವರ ನೇತೃತ್ವದಲ್ಲಿ ತೆರವುಗೊಳಿಸಿ, ತೆರವುಗೊಳಿಸಿರುವ ಸಾಮಗ್ರಿಗಳನ್ನು ತಾವೇ ತೆಗೆದುಕೊಂಡು ಹೋಗುವಂತೆ ಹಾಗೂ ಅನಧಿಕೃತ ಜಾಹೀರಾತು ಫಲಕಗಳಿಗೆ ದಂಡ ವಿಧಿಸಿ ಪಾಲಿಕೆಗೆ ಆರ್ಥಿಕವಾಗಿ ಹೊರೆಯಾಗದಂತೆ ಮುಂದೆ ವಿಧಿಸಿರುವ ನಿಬಂಧನೆಗಳ ಅನುಸಾರವಾರವಾಗಿ ತೆರವು ಕಾರ್ಯಾಚರಣೆ ನಡೆಸಲು ಮೆ॥ ಎಂ.ಎಂ.ಸ್ಟೀಲ್ಸ್., ಸಂಸ್ಥೆಯವರಿಗೆ ಪ್ರಾಯೋಗಿಕವಾಗಿ 3 ತಿಂಗಳವರೆಗೆ ನಡೆಸಲು ಈ ಕಾರ್ಯಾದೇಶ ನೀಡಲಾಗಿದೆ.

**ಸದರಿ ಕಾರ್ಯಾಚರಣೆಯನ್ನು ಬೊಮ್ಮನಹಳ್ಳಿ ವಲಯದ ಈ ಕೆಳಕಂಡ ತಂಡದ ನೇತೃತ್ವದಲ್ಲಿ ಕಾರ್ಯ ನಿರ್ವಹಿಸತಕ್ಕದ್ದು. ಬೊಮ್ಮನಹಳ್ಳಿ ವಲಯಕ್ಕೆ ಸಂಬಂಧಿಸಿದಂತೆ:–**

**ಅ) ಸಹಾಯಕ ಕಂದಾಯ ಅಧಿಕಾರಿಗಳು/ ಕಂದಾಯ ಅಧಿಕಾರಿಗಳು (ಜಾಹೀರಾತು)**
**ಆ) ಕಂದಾಯ ಪರಿವೀಕ್ಷಕರು**
**ಇ) ಕಂದಾಯ ವಸೂಲಿಗಾರರು**

**ಸದರಿ ಕಾರ್ಯಾಚರಣೆಯನ್ನು ಈ ಕೆಳಕಂಡ ಷರತ್ತುಗಳನ್ವಯ ನಿರ್ವಹಿಸತಕ್ಕದ್ದು.**

1. ನಿಮ್ಮ ಸಂಸ್ಥೆಯವರು ಸದರಿ ಕಾರ್ಯಚರಣೆಯನ್ನು ಸಹಾಯಕ ಕಂದಾಯ ಅಧಿಕಾರಿಗಳು / ಕಂದಾಯ ಅಧಿಕಾರಿಗಳು ಅವರ ಮಾರ್ಗದರ್ಶನದಂತೆ ಕಾರ್ಯಾಚರಣೆಯನ್ನು ನಿಗಧಿಪಡಿಸಿದ ವಲಯದಲ್ಲಿ ಮಾತ್ರ ನಡೆಸುವುದು.
2. ಅನಧಿಕೃತ/ನಿಯಮಬಾಹಿರ ಜಾಹೀರಾತು ಫಲಕಗಳನ್ನು ತೆರವುಗೊಳಿಸುವುದು.
3. ಅನಧಿಕೃತ/ನಿಯಮಬಾಹಿರ ಜಾಹೀರಾತು ಫಲಕಗಳನ್ನು ಆಯಾ ವಲಯದ ಸಹಾಯಕ ಕಂದಾಯ ಅಧಿಕಾರಿಗಳು ಗುರುತಿಸಿದ ನಂತರ ಸದರಿ ಸಂಸ್ಥೆಯವರು ಕಾರ್ಯಾಚರಣೆ ನಡೆಸತಕ್ಕದ್ದು. ತೆರವುಗೊಳಿಸಿದ ಅನಧಿಕೃತ ಜಾಹೀರಾತು ಸಾಮಗ್ರಿಗಳನ್ನು ನಿಯಮಾನುಸಾರ ತಮ್ಮ ವಶಕ್ಕೆ ಪಡೆದುಕೊಳ್ಳುವುದು ಹಾಗೂ ಅನಧಿಕೃತ ಜಾಹೀರಾತುಗಳಿಗೆ ಸಹಾಯಕ ಕಂದಾಯ ಅಧಿಕಾರಿಗಳು ದಂಡ ವಿಧಿಸಲು ಕ್ರಮ ಕೈಗೊಳ್ಳುವುದು. ದಂಡವನ್ನು ಲೆಕ್ಕಾಚಾರ ಮಾಡುವಾಗ ಸಹಾಯಕ ಕಂದಾಯ ಅಧಿಕಾರಿಗಳು ಜಾಹೀರಾತು ಬೈಲಾ ಅಡಿ ನಿಯಮಾನುಸಾರ ವಿಧಿಸಲು ಕ್ರಮ ಕೈಗೊಳ್ಳುವುದು.
4. ನ್ಯಾಯಾಲಯದಲ್ಲಿ ದಾವೆ ಹೂಡಿರುವ ಫಲಕಗಳ ಕುರಿತು ಖಚಿತ ಪಡಿಸಿಕೊಂಡು ನಂತರ ತೆರವುಗೊಳಿಸುವುದು.
5. ಸ್ವ–ಜಾಹೀರಾತು ಫಲಕಗಳಿಗೆ ಅನುಮತಿ ಪಡೆದು ವಾಣಿಜ್ಯ ಜಾಹೀರಾತು ಫಲಕ ಅಳವಡಿಸಿದ್ದಲ್ಲಿ/ನಿಯಮಾನುಸಾರ ಕ್ರಮ ಜರುಗಿಸಿ ತೆರವುಗೊಳಿಸತಕ್ಕದ್ದು.
6. ಬ್ಯಾನರ್, ಬಂಟಿಂಗ್ಸ್, ಕಟೌಟ್ಸ್‌ಗಳು, ಪೋಸ್ಟರ್‌ಗಳು, ಮರ ವಿದ್ಯುತ್ ಕಂಬಗಳ ಮೇಲಿರುವ ಜಾಹೀರಾತುಗಳನ್ನು ತೆರವುಗೊಳಿಸತಕ್ಕದ್ದು.

7. ಯಾವುದೇ ರೀತಿಯ ಜಾಹೀರಾತು ಬೈಲಾ ಉಲ್ಲಂಘನೆ ಪ್ರಕರಣಗಳನ್ನು ಕೂಡಾ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಗಳು ಗುರುತಿಸಿದ ನಂತರ ಸಂಸ್ಥೆಯವರು ಅವುಗಳನ್ನು ತೆರವುಗೊಳಿಸತಕ್ಕದ್ದು.
8. ಸದರಿ ತೆರವು ಕಾರ್ಯಾಚರಣೆಯ ಕುರಿತು 15 ದಿನಗಳಿಗೊಮ್ಮೆ ಪ್ರಗತಿ ಪರಿಶೀಲನಾ ಕುರಿತ ಸಭೆಯನ್ನು ಕೇಂದ್ರ ಕಛೇರಿ ಅಥವಾ ವಲಯ ಕಛೇರಿಯಲ್ಲಿ ನಡೆಸುವಾಗ ತೆರವು ಕಾರ್ಯಾಚರಣೆಯ ಸಂಪೂರ್ಣ ವರದಿಯನ್ನು ಭಾವಚಿತ್ರದೊಂದಿಗೆ ಸಲ್ಲಿಸತಕ್ಕದ್ದು.
9. ಸರ್ಕಾರಿ ಸ್ವತ್ತುಗಳ ಮೇಲಿನ ಜಾಹೀರಾತುಗಳ ಕುರಿತು ಕೇಂದ್ರ ಕಛೇರಿಯಿಂದ ಮಾಹಿತಿ ಪಡೆದು ಉಲ್ಲಂಘನೆ/ಅನಧಿಕೃತವಾದಲ್ಲಿ ಮಾತ್ರ ನಿಯಮಾನುಸಾರ ತೆರವುಗೊಳಿಸತಕ್ಕದ್ದು.
10. ಸದರಿ ಕಾರ್ಯಾಚರಣೆಯನ್ನು ಸ್ಥಳೀಯ ಪೊಲೀಸ್ ಭದ್ರತೆ ಪಡೆದು ತೆರವು ಕಾರ್ಯಾಚರಣೆ ನಡೆಸತಕ್ಕದ್ದು. ಯಾವುದೇ ತೊಂದರೆ ಉಂಟಾದಲ್ಲಿ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸುವ ಕಾರ್ಯವನ್ನು ವಲಯದ ಸಹಾಯಕ ಕಂದಾಯ ಅಧಿಕಾರಿಗಳು ನಿರ್ವಹಿಸತಕ್ಕದ್ದು.
11. ತೆರವು ಕಾರ್ಯಾಚರಣೆ ಮುಗಿದ ನಂತರ / 3 ತಿಂಗಳ ನಂತರ ಸಂಬಂಧಪಟ್ಟ ವಲಯದ ಸಹಾಯಕ ಕಂದಾಯ ಅಧಿಕಾರಿಗಳು/ಕಂದಾಯ ಅಧಿಕಾರಿಗಳು ತಮ್ಮ ವಲಯಗಳಲ್ಲಿ ಯಾವುದೇ ಅನಧಿಕೃತ/ನಿಯಮಬಾಹಿರ ಜಾಹೀರಾತು ಫಲಕಗಳು ಇಲ್ಲವೆಂದು ಲಿಖಿತ ಮೂಲಕ ಹೇಳಿಕೆಯನ್ನು ಸಹಾಯಕ ಆಯುಕ್ತರು (ಜಾಹೀರಾತು) ಕೇಂದ್ರ ಕಛೇರಿಗೆ ಸಲ್ಲಿಸತಕ್ಕದ್ದು.
12. ಮುಂದೆ ಯಾವುದಾದರೂ ಅನಧಿಕೃತ ಜಾಹೀರಾತುಗಳು ಇದ್ದಲ್ಲಿ ಅದಕ್ಕೆ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಯವರೇ ನೇರ ಜವಾಬ್ದಾರರಾಗಿರುತ್ತಾರೆ.
13. ಸದರಿ ಕಾರ್ಯಾದೇಶವನ್ನು ಯಾವುದೇ ಹಂತದಲ್ಲಿ ರದ್ದುಪಡಿಸುವ ಅಥವಾ ಮುಂದುವರೆಸುವ ಬಗ್ಗೆ ಅಂತಿಮ ತೀರ್ಮಾನವನ್ನು ಮಾನ್ಯ ಆಯುಕ್ತರು ಹೊಂದಿರುತ್ತಾರೆ.

ಈ ಮೇಲ್ಕಂಡ ತೆರವು ಕಾರ್ಯಾಚರಣೆಯನ್ನು ದಿನಾಂಕ: 17-2-2014 ದಿಂದ 16-5-2014 ವರೆಗೆ ನಡೆಸಲು ಈ ಕಾರ್ಯಾದೇಶವನ್ನು ನೀಡಲಾಗಿದೆ.

-ಸಹಿ-
ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಗೆ,
ಮೆ॥ ಎಂ.ಎಂ.ಸ್ಟೀಲ್ಸ್,
ನಂ.ಮಾಗಡಿ ಮುಖ್ಯ ರಸ್ತೆ, ವಿನಾಯಕನಗರ,
ಕಾಮಾಕ್ಷಿಪಾಳ್ಯ,
ಬೆಂಗಳೂರು-560 079.

ಪ್ರತಿಯನ್ನು:-
1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು, ಆಪ್ತ ಕಾರ್ಯದರ್ಶಿಯವರಿಗೆ ಸಲ್ಲಿಸಿದೆ.
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು, ಆಪ್ತ ಕಾರ್ಯದರ್ಶಿಯವರಿಗೆ ಸಲ್ಲಿಸಿದೆ.
3. ಮಾನ್ಯ ಆಯುಕ್ತರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮಾನ್ಯ ಅಪರ ಆಯುಕ್ತರು (ಜಾಹೀರಾತು) ರವರ ಅವಗಾಹನೆಗೆ ಸಲ್ಲಿಸಿದೆ.
6. ಕೌನ್ಸಿಲ್ ಕಾರ್ಯದರ್ಶಿಯವರ ಅವಗಾಹನೆಗೆ ತರಲು, ಆಪ್ತ ಕಾರ್ಯದರ್ಶಿಯವರಿಗೆ ಸಲ್ಲಿಸಿದೆ.
7. ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅಧ್ಯಕ್ಷರವರ ಅವಗಾಹನೆಗೆ ಸಲ್ಲಿಸಿದೆ.
8. ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿರವರ ಅವಗಾಹನೆಗೆ ಸಲ್ಲಿಸಿದೆ.
9. ಅಪೀಲು ಸ್ಥಾಯಿ ಸಮಿತಿಯವರ ಅವಗಾಹನೆಗೆ ಸಲ್ಲಿಸಿದೆ.
10. ಎಲ್ಲಾ ವಲಯದ ಅಪರ/ಜಂಟಿ ಆಯುಕ್ತರು ಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11. ಕಛೇರಿ ಕಡತಕ್ಕೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

14/02/2014 ReceVd

Liyakath

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
# BRUHAT BANGALORE MAHANAGARA PALIKE

ಸಹಾಯಕ ಆಯುಕ್ತರು (ಜಾಹೀರಾತು) ರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು–02.

ಸಂಖ್ಯೆ:ಸ.ಆ.(ಜಾ)ಪಿಆರ್/2707/13–14 ದಿನಾಂಕ:05.02.2014

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಜಾಹೀರಾತು ವಿಭಾಗ ಬೆಂಗಳೂರು

## ಕಾರ್ಯಾದೇಶ

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತ/ಕಾನೂನುಬಾಹಿರ ಜಾಹೀರಾತುಗಳನ್ನು ತೆರವುಗೊಳಿಸುವ ಕುರಿತು.

ಉಲ್ಲೇಖ: ಮೆ॥ ಸೈಟ್ ಎಫೆಕ್ಟ್ಸ್, ರವರ ಮನವಿ ದಿನಾಂಕ:05.02.2014

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಿತ ಮನವಿಯಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತ/ನಿಯಮಬಾಹಿರವಾಗಿ ಅಳವಡಿಸಿರುವ ವಿವಿಧ ರೀತಿಯ ಜಾಹೀರಾತುಗಳನ್ನು ಪಾಲಿಕೆಗೆ ಆರ್ಥಿಕವಾಗಿ ಹೊರೆಯಾಗದಂತೆ ಉಚಿತವಾಗಿ ತೆರವು ಕಾರ್ಯಾಚರಣೆಯನ್ನು ನಡೆಸುವುದಾಗಿ ಮೆ॥ ಸೈಟ್ ಎಫೆಕ್ಟ್ಸ್, ಸಂಸ್ಥೆಯವರು ಕೋರಿಕೆ ಸಲ್ಲಿಸಿರುತ್ತಾರೆ.

ಈ ಬಗ್ಗೆ ಪರಿಶೀಲಿಸಿ, ಪಾಲಿಕೆ ವ್ಯಾಪ್ತಿಯ ದಾಸರಹಳ್ಳಿ ವಲಯದಲ್ಲಿರುವ ಅನಧಿಕೃತ ಜಾಹೀರಾತು ಫಲಕಗಳನ್ನು ಸದರಿ ವಲಯದ ಸಹಾಯಕ ಕಂದಾಯ ಅಧಿಕಾರಿ (ಜಾಹೀರಾತು) ರವರ ನೇತೃತ್ವದಲ್ಲಿ ತೆರವುಗೊಳಿಸಿ, ತೆರವುಗೊಳಿಸಿರುವ ಸಾಮಗ್ರಿಗಳನ್ನು ತಾವೇ ತೆಗೆದುಕೊಂಡು ಹೋಗುವಂತೆ ಹಾಗೂ ಅನಧಿಕೃತ ಜಾಹೀರಾತು ಫಲಕಗಳಿಗೆ ದಂಡ ವಿಧಿಸಿ ಪಾಲಿಕೆಗೆ ಆರ್ಥಿಕವಾಗಿ ಹೊರೆಯಾಗದಂತೆ ಮುಂದೆ ವಿಧಿಸಿರುವ ನಿಬಂಧನೆಗಳ ಅನುಸಾರವಾಗಿ ತೆರವು ಕಾರ್ಯಾಚರಣೆ ನಡೆಸಲು ಮೆ॥ ಸೈಟ್ ಎಫೆಕ್ಟ್ಸ್, ಸಂಸ್ಥೆಯವರಿಗೆ ಪ್ರಾಯೋಗಿಕವಾಗಿ 3 ತಿಂಗಳವರೆಗೆ ನಡೆಸಲು ಈ ಕಾರ್ಯಾದೇಶ ನೀಡಲಾಗಿದೆ.

ಸದರಿ ಕಾರ್ಯಾಚರಣೆಯನ್ನು ದಾಸರಹಳ್ಳಿ ವಲಯದ ಈ ಕೆಳಕಂಡ ತಂಡದ ನೇತೃತ್ವದಲ್ಲಿ ಕಾರ್ಯ ನಿರ್ವಹಿಸತಕ್ಕದ್ದು.
ದಾಸರಹಳ್ಳಿ ವಲಯಕ್ಕೆ ಸಂಬಂಧಿಸಿದಂತೆ:–

- ಅ) ಸಹಾಯಕ ಕಂದಾಯ ಅಧಿಕಾರಿಗಳು/ ಕಂದಾಯ ಅಧಿಕಾರಿಗಳು (ಜಾಹೀರಾತು)
- ಆ) ಕಂದಾಯ ಪರಿವೀಕ್ಷಕರು
- ಇ) ಕಂದಾಯ ವಸೂಲಿಗಾರರು

ಸದರಿ ಕಾರ್ಯಾಚರಣೆಯನ್ನು ಈ ಕೆಳಕಂಡ ಷರತ್ತುಗಳನ್ವಯ ನಿರ್ವಹಿಸತಕ್ಕದ್ದು.

1. ನಿಮ್ಮ ಸಂಸ್ಥೆಯವರು ಸದರಿ ಕಾರ್ಯಾಚರಣೆಯನ್ನು ಸಹಾಯಕ ಕಂದಾಯ ಅಧಿಕಾರಿಗಳು / ಕಂದಾಯ ಅಧಿಕಾರಿಗಳು ಅವರ ಮಾರ್ಗದರ್ಶನದಂತೆ ಕಾರ್ಯಾಚರಣೆಯನ್ನು ನಿಗಧಿಪಡಿಸಿದ ವಲಯದಲ್ಲಿ ಮಾತ್ರ ನಡೆಸುವುದು.
2. ಅನಧಿಕೃತ/ನಿಯಮಬಾಹಿರ ಜಾಹೀರಾತು ಫಲಕಗಳನ್ನು ತೆರವುಗೊಳಿಸುವುದು.
3. ಅನಧಿಕೃತ/ನಿಯಮಬಾಹಿರ ಜಾಹೀರಾತು ಫಲಕಗಳನ್ನು ಆಯಾ ವಲಯದ ಸಹಾಯಕ ಕಂದಾಯ ಅಧಿಕಾರಿಗಳು ಗುರುತಿಸಿದ ನಂತರ ಸದರಿ ಸಂಸ್ಥೆಯವರು ಕಾರ್ಯಾಚರಣೆ ನಡೆಸತಕ್ಕದ್ದು, ತೆರವುಗೊಳಿಸಿದ ಅನಧಿಕೃತ ಜಾಹೀರಾತು ಸಾಮಗ್ರಿಗಳನ್ನು ನಿಯಮಾನುಸಾರ ತಮ್ಮ ವಶಕ್ಕೆ ಪಡೆದುಕೊಳ್ಳುವುದು ಹಾಗೂ ಅನಧಿಕೃತ ಜಾಹೀರಾತುಗಳಿಗೆ ಸಹಾಯಕ ಕಂದಾಯ ಅಧಿಕಾರಿಗಳು ದಂಡ ವಿಧಿಸಲು ಕ್ರಮ ಕೈಗೊಳ್ಳುವುದು. ದಂಡವನ್ನು ಲೆಕ್ಕಾಚಾರ ಮಾಡುವಾಗ ಸಹಾಯಕ ಕಂದಾಯ ಅಧಿಕಾರಿಗಳು ಜಾಹೀರಾತು ಬೈಲಾ ಅಡಿ ನಿಯಮಾನುಸಾರ ವಿಧಿಸಲು ಕ್ರಮ ಕೈಗೊಳ್ಳುವುದು.
4. ನ್ಯಾಯಾಲಯದಲ್ಲಿ ದಾವೆ ಹೂಡಿರುವ ಫಲಕಗಳ ಕುರಿತು ಖಚಿತ ಪಡಿಸಿಕೊಂಡು ನಂತರ ತೆರವುಗೊಳಿಸುವುದು.
5. ಸ್ವ–ಜಾಹೀರಾತು ಫಲಕಗಳಿಗೆ ಅನುಮತಿ ಪಡೆದು ವಾಣಿಜ್ಯ ಜಾಹೀರಾತು ಫಲಕ ಅಳವಡಿಸಿದ್ದಲ್ಲಿ/ನಿಯಮಾನುಸಾರ ಕ್ರಮ ಜರುಗಿಸಿ ತೆರವುಗೊಳಿಸತಕ್ಕದ್ದು.
6. ಬ್ಯಾನರ್, ಬಂಟಿಂಗ್ಸ್, ಕಟೌಟ್‌ಗಳು, ಪೋಸ್ಟರ್‌ಗಳು, ಮರ ವಿದ್ಯುತ್ ಕಂಬಗಳ ಮೇಲಿರುವ ಜಾಹೀರಾತುಗಳನ್ನು ತೆರವುಗೊಳಿಸತಕ್ಕದ್ದು.

–2

15

7. ಯಾವುದೇ ರೀತಿಯ ಜಾಹೀರಾತು ಬೈಲಾ ಉಲ್ಲಂಘನೆ ಪ್ರಕರಣಗಳನ್ನು ಕೂಡಾ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಗಳು ಗುರುತಿಸಿದ ನಂತರ ಸಂಸ್ಥೆಯವರು ಅವುಗಳನ್ನು ತೆರವುಗೊಳಿಸತಕ್ಕದ್ದು.
8. ಸದರಿ ತೆರವು ಕಾರ್ಯಾಚರಣೆಯ ಕುರಿತು 15 ದಿನಗಳಿಗೊಮ್ಮೆ ಪ್ರಗತಿ ಪರಿಶೀಲನಾ ಕುರಿತ ಸಭೆಯನ್ನು ಕೇಂದ್ರ ಕಛೇರಿ ಅಥವಾ ವಲಯ ಕಛೇರಿಯಲ್ಲಿ ನಡೆಸುವಾಗ ತೆರವು ಕಾರ್ಯಾಚರಣೆಯ ಸಂಪೂರ್ಣ ವರದಿಯನ್ನು ಛಾಯಾಚಿತ್ರದೊಂದಿಗೆ ಸಲ್ಲಿಸತಕ್ಕದ್ದು.
9. ಸರ್ಕಾರಿ ಸ್ವತ್ತುಗಳ ಮೇಲಿನ ಜಾಹೀರಾತುಗಳ ಕುರಿತು ಕೇಂದ್ರ ಕಛೇರಿಯಿಂದ ಮಾಹಿತಿ ಪಡೆದು ಉಲ್ಲಂಘನೆ/ಅನಧಿಕೃತವಾದಲ್ಲಿ ಮಾತ್ರ ನಿಯಮಾನುಸಾರ ತೆರವುಗೊಳಿಸತಕ್ಕದ್ದು.
10. ಸದರಿ ಕಾರ್ಯಾಚರಣೆಯನ್ನು ಸ್ಥಳೀಯ ಪೊಲೀಸ್ ಭದ್ರತೆ ಪಡೆದು ತೆರವು ಕಾರ್ಯಾಚರಣೆ ನಡೆಸತಕ್ಕದ್ದು. ಯಾವುದೇ ತೊಂದರೆ ಉಂಟಾದಲ್ಲಿ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸುವ ಕಾರ್ಯವನ್ನು ವಲಯದ ಸಹಾಯಕ ಕಂದಾಯ ಅಧಿಕಾರಿಗಳು ನಿರ್ವಹಿಸತಕ್ಕದ್ದು.
11. ತೆರವು ಕಾರ್ಯಾಚರಣೆ ಮುಗಿದ ನಂತರ / 3 ತಿಂಗಳ ನಂತರ ಸಂಬಂಧಪಟ್ಟ ವಲಯದ ಸಹಾಯಕ ಕಂದಾಯ ಅಧಿಕಾರಿಗಳು/ಕಂದಾಯ ಅಧಿಕಾರಿಗಳು ತಮ್ಮ ವಲಯಗಳಲ್ಲಿ ಯಾವುದೇ ಅನಧಿಕೃತ/ನಿಯಮಬಾಹಿರ ಜಾಹೀರಾತು ಫಲಕಗಳು ಇಲ್ಲವೆಂದು ಲಿಖಿತ ಮೂಲಕ ಹೇಳಿಕೆಯನ್ನು ಸಹಾಯಕ ಆಯುಕ್ತರು (ಜಾಹೀರಾತು) ಕೇಂದ್ರ ಕಛೇರಿಗೆ ಸಲ್ಲಿಸತಕ್ಕದ್ದು.
12. ಮುಂದೆ ಯಾವುದಾದರೂ ಅನಧಿಕೃತ ಜಾಹೀರಾತುಗಳು ಇದ್ದಲ್ಲಿ ಅದಕ್ಕೆ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಯವರೇ ನೇರ ಜವಾಬ್ದಾರರಾಗಿರುತ್ತಾರೆ.
13. ಸದರಿ ಕಾರ್ಯಾದೇಶವನ್ನು ಯಾವುದೇ ಹಂತದಲ್ಲಿ ರದ್ದುಪಡಿಸುವ ಅಥವಾ ಮುಂದುವರೆಸುವ ಬಗ್ಗೆ ಅಂತಿಮ ತೀರ್ಮಾನವನ್ನು ಮಾನ್ಯ ಆಯುಕ್ತರು ಹೊಂದಿರುತ್ತಾರೆ.

ಈ ಮೇಲ್ಕಂಡ ತೆರವು ಕಾರ್ಯಾಚರಣೆಯನ್ನು ದಿನಾಂಕ 20|2|14 ರಿಂದ 19|5|14 ವರೆಗೆ ನಡೆಸಲು ಈ ಕಾರ್ಯಾದೇಶವನ್ನು ನೀಡಲಾಗಿದೆ.

-ಸಹಿ-
ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಗೆ,
ಮೆ|| ಸ್ಕೈಟ್ ಎಫೆಕ್ಟ್,
ನಂ.1441, "ಕಾಮಧೇನು", 2ನೇ ಅಡ್ಡರಸ್ತೆ,
1ನೇ ಹಂತ, 2ನೇ ಘಟ್ಟ, ಚಂದ್ರಾ ಬಡಾವಣೆ,
ಬೆಂಗಳೂರು-560 039.

ಪ್ರತಿಯನ್ನು:-
1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು, ಆಪ್ತ ಕಾರ್ಯದರ್ಶಿಯವರಿಗೆ ಸಲ್ಲಿಸಿದೆ.
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು, ಆಪ್ತ ಕಾರ್ಯದರ್ಶಿಯವರಿಗೆ ಸಲ್ಲಿಸಿದೆ.
3. ಮಾನ್ಯ ಆಯುಕ್ತರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮಾನ್ಯ ಅಪರ ಆಯುಕ್ತರು (ಜಾಹೀರಾತು) ರವರ ಅವಗಾಹನೆಗೆ ಸಲ್ಲಿಸಿದೆ.
6. ಕೌನ್ಸಿಲ್ ಕಾರ್ಯದರ್ಶಿಯವರ ಅವಗಾಹನೆಗೆ ತರಲು, ಆಪ್ತ ಕಾರ್ಯದರ್ಶಿಯವರಿಗೆ ಸಲ್ಲಿಸಿದೆ.
7. ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅಧ್ಯಕ್ಷರವರ ಅವಗಾಹನೆಗೆ ಸಲ್ಲಿಸಿದೆ.
8. ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿರವರ ಅವಗಾಹನೆಗೆ ಸಲ್ಲಿಸಿದೆ.
9. ಅಪೀಲು ಸ್ಥಾಯಿ ಸಮಿತಿಯವರ ಅವಗಾಹನೆಗೆ ಸಲ್ಲಿಸಿದೆ.
10. ಎಲ್ಲಾ ವಲಯದ ಅಪರ/ಜಂಟಿ ಆಯುಕ್ತರು ಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11. ಕಛೇರಿ ಕಡತಕ್ಕೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

9880345684
Devanand

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
# BRUHAT BANGALORE MAHANAGARA PALIKE

ಸಹಾಯಕ ಆಯುಕ್ತರು (ಜಾಹೀರಾತು) ರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು-02.

ಸಂಖ್ಯೆ:ಸ.ಆ.(ಜಾ)ಪಿಆರ್/83/13-14 ದಿನಾಂಕ:28.01.2014

## ಕಾರ್ಯಾದೇಶ

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತ/ಕಾನೂನುಬಾಹಿರ ಜಾಹೀರಾತುಗಳನ್ನು ತೆರವುಗೊಳಿಸುವ ಕುರಿತು.

ಉಲ್ಲೇಖ: ಮೆ॥ ಈಗಲ್ ಎನ್‌ಫೋರ್ಸ್‌ಮೆಂಟ್ ಸಲ್ಯೂಷನ್‌ರವರ ಮನವಿ ದಿನಾಂಕ28.09.2013

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಿತ ಮನವಿಯಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತ/ಕಾನೂನು ಬಾಹಿರವಾಗಿ ಅಳವಡಿಸಿರುವ ವಿವಿಧ ರೀತಿಯ ಜಾಹೀರಾತುಗಳನ್ನು ಪಾಲಿಕೆಗೆ ಆರ್ಥಿಕವಾಗಿ ಹೊರೆಯಾಗದಂತೆ ಉಚಿತವಾಗಿ ತೆರವು ಕಾರ್ಯಾಚರಣೆಯನ್ನು ನಡೆಸುವುದಾಗಿ ಮೆ॥ ಈಗಲ್ ಐ ಎನ್‌ಫೋರ್ಸ್‌ಮೆಂಟ್ ಸಲ್ಯೂಷನ್ಸ್., ಸಂಸ್ಥೆಯವರು ಕೋರಿಕೆ ಸಲ್ಲಿಸಿರುತ್ತಾರೆ.

ಈ ಬಗ್ಗೆ ಪರಿಶೀಲಿಸಿ, ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ತರಹದ ಜಾಹೀರಾತು ಉಲ್ಲಂಘನೆಗಳ ಬಗ್ಗೆ ಪಾಲಿಕೆಗೆ ಆರ್ಥಿಕವಾಗಿ ಹೊರೆಯಾಗದಂತೆ ಮುಂದೆ ವಿಧಿಸಿರುವ ನಿಬಂಧನೆಗಳ ಅನುಸಾರವಾರವಾಗಿ ನಡೆಸಲು ಮೆ॥ ಈಗಲ್ ಎನ್‌ಪೋರ್ಸ್‌ಮೆಂಟ್ ಸಂಸ್ಥೆಯವರಿಗೆ ಈ ಕಾರ್ಯಾದೇಶ ನೀಡಲಾಗಿದೆ.

ಸದರಿ ಕಾರ್ಯಾಚರಣೆಯ ಮೇಲ್ವಿಚಾರಣೆಯ ತಂಡವನ್ನು ನಿಯಮಿಸಲಾಗಿದೆ.

1. ಅಪರ ಆಯುಕ್ತರು (ಜಾಹೀರಾತು)
2. ಸಹಾಯಕ ಆಯುಕ್ತರು (ಜಾಹೀರಾತು-ಕೇಂದ್ರ).
3. ಕಾನೂನುಕೋಶದ ಅಧಿಕಾರಿ.
4. ಬಿ.ಎಂ.ಟಿ.ಎಫ್.ಕಛೇರಿಯ ಅಧಿಕಾರಿ (ಇನ್ಸ್‌ಪೆಕ್ಟರ್ ಹುದ್ದೆಗಿಂತ ಕಡಿಮೆ ಇರತಕ್ಕದ್ದಲ್ಲ).

ಸದರಿ ಕಾರ್ಯಾಚರಣೆಯನ್ನು ಈ ಕೆಳಕಂಡ ವಿಶೇಷ ತಂಡವು ಮೇಲಿನ ಮೇಲ್ವಿಚಾರಣೆ ತಂಡದ ನೇತೃತ್ವದಲ್ಲಿ ಕಾರ್ಯ ನಿರ್ವಹಿಸತಕ್ಕದ್ದು.

1. ಪೂರ್ವ ವಲಯಕ್ಕೆ ಸಂಬಂಧಿಸಿದಂತೆ:-
   ಅ) ಸಹಾಯಕ ಕಂದಾಯ ಅಧಿಕಾರಿಗಳು
   ಆ) ಕಾರ್ಯಪಾಲಕ ಅಭಿಯಂತರರು (ಜಾಹೀರಾತು_ಕೇಂದ್ರ)
   ಇ) ಕಂದಾಯ ಅಧಿಕಾರಿಗಳು
   ಈ) ಕಂದಾಯ ವಸೂಲಿಗಾರರು
2. ಪಶ್ಚಿಮ ವಲಯಕ್ಕೆ ಸಂಬಂಧಿಸಿದಂತೆ:-
   ಅ) ಸಹಾಯಕ ಕಂದಾಯ ಅಧಿಕಾರಿಗಳು
   ಆ) ಸಹಾಯಕ ಕಾರ್ಯಪಾಲಕ ಅಭಿಯಂತರರು (ಜಾಹೀರಾತು_ಕೇಂದ್ರ)
   ಇ) ಕಂದಾಯ ಅಧಿಕಾರಿಗಳು
   ಈ) ಕಂದಾಯ ವಸೂಲಿಗಾರರು
3. ದಕ್ಷಿಣ ವಲಯಕ್ಕೆ ಸಂಬಂಧಿಸಿದಂತೆ:-
   ಅ) ಸಹಾಯಕ ಕಂದಾಯ ಅಧಿಕಾರಿಗಳು
   ಆ) ಸಹಾಯಕ ಅಭಿಯಂತರರು (ಜಾಹೀರಾತು_ಕೇಂದ್ರ)
   ಇ) ಕಂದಾಯ ಅಧಿಕಾರಿಗಳು
   ಈ) ಕಂದಾಯ ವಸೂಲಿಗಾರರು

--2

**ಸದರಿ ಕಾರ್ಯಾಚರಣೆಯನ್ನು ಈ ಕೆಳಕಂಡ ಷರತ್ತುಗಳನ್ವಯ ನಿರ್ವಹಿಸತಕ್ಕದ್ದು.**

1. ನಿಮ್ಮ ಸಂಸ್ಥೆಯವರು ಸದರಿ ಕಾರ್ಯಚರಣೆಯನ್ನು ವಿಶೇಷ ತಂಡದ ಹಾಗೂ ಮೇಲ್ವಿಚಾರಣೆ ತಂಡದ ನೇತೃತ್ವದಲ್ಲಿ ಅವರ ಮಾರ್ಗದರ್ಶನದಂತೆ ಕಾರ್ಯಾಚರಣೆಯನ್ನು ಪೂರ್ವ, ಪಶ್ಚಿಮ ಹಾಗೂ ದಕ್ಷಿಣ ವಲಯಗಳಲ್ಲಿ ಮಾತ್ರ ನಡೆಸುವುದು.
2. ಅನಧಿಕೃತ/ನಿಯಮಬಾಹಿರ ಜಾಹೀರಾತು ಫಲಕಗಳನ್ನು ತೆರವುಗೊಳಿಸುವುದು.
3. ಅನಧಿಕೃತ/ನಿಯಮಬಾಹಿರ ಜಾಹೀರಾತು ಫಲಕಗಳನ್ನು ಆಯಾ ವಲಯದ ಸಹಾಯಕ ಕಂದಾಯ ಅಧಿಕಾರಿಗಳು ಗುರುತಿಸಿದ ನಂತರ ಸದರಿ ಸಂಸ್ಥೆಯವರು ಕಾರ್ಯಾಚರಣೆ ನಡೆಸತಕ್ಕದ್ದು. ತೆರವುಗೊಳಿಸಿದ ಅನಧಿಕೃತ ಜಾಹೀರಾತು ಸಾಮಗ್ರಿಗಳನ್ನು ಪಾಲಿಕೆ ವಶಕ್ಕೆ ನೀಡುವುದು ಹಾಗೂ ಅನಧಿಕೃತ ಜಾಹೀರಾತುಗಳಿಗೆ ಸಹಾಯಕ ಕಂದಾಯ ಅಧಿಕಾರಿಗಳು ದಂಡ ವಿಧಿಸಲು ಕ್ರಮ ಕೈಗೊಳ್ಳುವುದು. ಆ ರೀತಿಯಾಗಿ ವಸೂಲಿಯಾದ ದಂಡದಲ್ಲಿ ಶೇ 50% ರಷ್ಟು ಸೇವಾ ಶುಲ್ಕವನ್ನು ಸದರಿ ಸಂಸ್ಥೆಗೆ ಪಾವತಿಸಲಾಗುವುದು. ದಂಡವನ್ನು ಲೆಕ್ಕಾಚಾರ ಮಾಡುವಾಗ ಸಹಾಯಕ ಕಂದಾಯ ಅಧಿಕಾರಿಗಳು ಜಾಹೀರಾತು ಬೈಲಾ ಅಡಿ ನಿಯಮಾನುಸಾರ ವಿಧಿಸಲು ಕ್ರಮ ಕೈಗೊಳ್ಳುವುದು.
4. ನ್ಯಾಯಾಲಯದಲ್ಲಿ ದಾವೆ ಹೂಡಿರುವ ಫಲಕಗಳ ಕುರಿತು ಖಚಿತ ಪಡಿಸಿಕೊಂಡು ನಂತರ ತೆರವುಗೊಳಿಸುವುದು.
5. ಸ್ವ-ಜಾಹೀರಾತು ಫಲಕಗಳಿಗೆ ಅನುಮತಿ ಪಡೆದು ವಾಣಿಜ್ಯ ಜಾಹೀರಾತು ಫಲಕ ಅಳವಡಿಸಿದ್ದಲ್ಲಿ/ನಿಯಮಾನುಸಾರ ಕ್ರಮ ಜರುಗಿಸಿ ತೆರವುಗೊಳಿಸತಕ್ಕದ್ದು.
6. ಬ್ಯಾನರ್, ಬಂಟಿಂಗ್ಸ್, ಕಟೌಟ್‌ಗಳು, ಪೋಸ್ಟರ್‌ಗಳು, ಮರ, ವಿದ್ಯುತ್ ಕಂಬಗಳ ಮೇಲಿರುವ ಜಾಹೀರಾತುಗಳನ್ನು ತೆರವುಗೊಳಿಸತಕ್ಕದ್ದು.
7. ಯಾವುದೇ ರೀತಿಯ ಜಾಹೀರಾತು ಬೈಲಾ ಉಲ್ಲಂಘನೆ ಪ್ರಕರಣಗಳನ್ನು ಕೂಡಾ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಗಳು ಗುರುತಿಸಿದ ನಂತರ ಸಂಸ್ಥೆಯವರು ಅವುಗಳನ್ನು ತೆರವುಗೊಳಿಸತಕ್ಕದ್ದು.
8. ಸದರಿ ತೆರವು ಕಾರ್ಯಾಚರಣೆಯ ಕುರಿತು 15 ದಿನಗಳಿಗೊಮ್ಮೆ ಪ್ರಗತಿ ಪರಿಶೀಲನಾ ಕುರಿತ ಸಭೆಯನ್ನು ಮೇಲ್ವಿಚಾರಣೆ ತಂಡವು ಆಯೋಜಿಸಿದಾಗ ತೆರವು ಕಾರ್ಯಾಚರಣೆಯ ಸಂಪೂರ್ಣ ವರದಿಯನ್ನು ಭಾವಚಿತ್ರದೊಂದಿಗೆ ಸಲ್ಲಿಸತಕ್ಕದ್ದು.
9. ಸರ್ಕಾರಿ ಸ್ವತ್ತುಗಳ ಮೇಲಿನ ಜಾಹೀರಾತುಗಳ ಕುರಿತು ಕೇಂದ್ರ ಕಛೇರಿಯಿಂದ ಮಾಹಿತಿ ಪಡೆದು ಉಲ್ಲಂಘನೆ/ಅನಧಿಕೃತವಾದಲ್ಲಿ ಮಾತ್ರ ನಿಯಮಾನುಸಾರ ತೆರವುಗೊಳಿಸತಕ್ಕದ್ದು.
10. ಸದರಿ ಕಾರ್ಯಾಚರಣೆಯನ್ನು ಸ್ಥಳೀಯ ಪೊಲೀಸ್ ಭದ್ರತೆ ಪಡೆದು ತೆರವು ಕಾರ್ಯಾಚರಣೆ ನಡೆಸತಕ್ಕದ್ದು. ಯಾವುದೇ ತೊಂದರೆ ಉಂಟಾದಲ್ಲಿ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸುವ ಕಾರ್ಯವನ್ನು ವಲಯದ ಸಹಾಯಕ ಕಂದಾಯ ಅಧಿಕಾರಿಗಳು ನಿರ್ವಹಿಸತಕ್ಕದ್ದು.
11. ತೆರವು ಕಾರ್ಯಾಚರಣೆ ಮುಗಿದ ನಂತರ / 3 ತಿಂಗಳ ನಂತರ 3 ವಲಯಗಳ ಸಹಾಯಕ ಕಂದಾಯ ಅಧಿಕಾರಿಗಳು ತಮ್ಮ ವಲಯಗಳಲ್ಲಿ ಯಾವುದೇ ಅನಧಿಕೃತ/ನಿಯಮಬಾಹಿರ ಜಾಹೀರಾತು ಫಲಕಗಳು ಇಲ್ಲವೆಂದು ಲಿಖಿತ ಮೂಲಕ ಹೇಳಿಕೆಯನ್ನು ಸಹಾಯಕ ಆಯುಕ್ತರು (ಜಾಹೀರಾತು) ಕೇಂದ್ರ ಕಛೇರಿಗೆ ಸಲ್ಲಿಸತಕ್ಕದ್ದು.
12. ಮುಂದೆ ಯಾವುದಾದರೂ ಅನಧಿಕೃತ ಜಾಹೀರಾತುಗಳು ಇದ್ದಲ್ಲಿ ಅದಕ್ಕೆ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಯವರೇ ನೇರ ಜವಾಬ್ದಾರರಾಗಿರುತ್ತಾರೆ.

ಈ ಮೇಲ್ಕಂಡ ಮೇಲ್ವಿಚಾರಣೆ ಹಾಗೂ ವಿಶೇಷ ಕಾರ್ಯಾಚರಣೆ ತಂಡದೊಂದಿಗೆ ತೆರವು ಕಾರ್ಯಾಚರಣೆಯನ್ನು ನೀಡಿದ ದಿನಾಂಕ: 01.02.2014 ರಿಂದ 30.04.2014 ರ ವರೆಗೆ ನಡೆಸಲು ಈ ಕಾರ್ಯಾದೇಶವನ್ನು ನೀಡಲಾಗಿದೆ.

-ಸಹಿ-
ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಮೆ॥ ಈಗಲ್ ಐ ಎನ್‌ಫೋರ್ಸ್‌ಮೆಂಟ್ ಸಲ್ಯೂಷನ್,
ನಂ.404, ಪ್ರಕಾಶ್ ನಿಲಯ, 7ನೇ ಮುಖ್ಯರಸ್ತೆ,
2ನೇ ಬ್ಲಾಕ್, ಜಯನಗರ,
ಬೆಂಗಳೂರು-560 005.

ಪ್ರತಿಯನ್ನು:-

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು, ಆಪ್ತ ಕಾರ್ಯದರ್ಶಿಯವರಿಗೆ ಸಲ್ಲಿಸಿದೆ.
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು, ಆಪ್ತ ಕಾರ್ಯದರ್ಶಿಯವರಿಗೆ ಸಲ್ಲಿಸಿದೆ.
3. ಮಾನ್ಯ ಆಯುಕ್ತರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
